# ಹಂಪಿ ಟೈಮ್ಸ್
HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 276 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 10.05.2025 • ಶನಿವಾರ • ಪುಟ:04 • ಬೆಲೆ:2
Volume:02 • Issue: 276 • PRGI No:KARKAN/2023/88055 • VIJAYANAGARA • 10.05.2025 • Saturday • Page:04 • Rs:2



1,30,000+
Digital E-PAPER READERS
To book Classified Display Ad
in HAMPI TIMES
Please call on
9448633038
No.1 HAMPI TIMES LEADING PRINT & DIGITAL District News Paper



ಹಂಪಿ ಟೈಮ್ಸ್
SCAN TO WATCH
SSLC ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...


**ನಿನಗೆ ನೀನೇ ಬೆಳಕು**

ಇತರರ ಹಿತಕ್ಕಾಗಿ ಬದುಕಿದರೆ ಬದುಕು ಪುಣ್ಯಮಯವಾಗುತ್ತದೆ. ಸೇವೇಯೆ ಶ್ರೇಷ್ಠ ಧರ್ಮ


Call Us for Advertisements
Good Opportunity for Branding
ನಿಮ್ಮೂರ ಜಾತ್ರೆ ಉತ್ಸವಕ್ಕೆ ಶುಭಾಶಯ, ಸಾಧಕರಿಗೆ/ ವಿದ್ಯಾರ್ಥಿಗಳಿಗೆ ಅಭಿನಂದನೆ ಕೋರಲು ಸಂಪರ್ಕಿಸಿ
M:9448633038
ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


**ದೇವಾಲಯ ದರ್ಶನ**

ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

**-: ಪ್ರಯತ್ನಿಸು :-**

ನೀವು ಹಲವು ಬಾರಿ ಸೋಲಬಹುದು ಆದರೆ ನಿರಂತರ ಪ್ರಯತ್ನ ನಿಮ್ಮನ್ನು ಎಂದೂ ಸೋಲಲು ಬಿಡುವುದಿಲ್ಲ.

# ತುರ್ತು ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರು ಸೈನಿಕರಂತೆ ಕಾರ್ಯ ನಿರ್ವಹಿಸೋಣ

## ಮಾಕ್ ಡ್ರಿಲ್ ತುರ್ತು ಪರಿಸ್ಥಿತಿ ಸೈರನ್ ಮೊಳಗಿಸಿ ಜನಜಾಗೃತಿ

### ಶಾಸಕ ಬಸನಗೌಡ ದದ್ದಲ್ ಹೇಳಿಕೆ|ಆಪರೇಷನ್ ಅಭ್ಯಾಸ್ ಯಶಸ್ವಿ|ಶಾಸಕರು,ಡಿಸಿ.,ಸಿಇಓ,ಎಸ್ಪಿ ಭಾಗಿ

■ ಹಂಪಿ ಟೈಮ್ಸ್ ರಾಯಚೂರು/ಹೊಸಪೇಟೆ

ಕೇಂದ್ರ ಗೃಹ ಸಚಿವಾಲಯದ ಸೂಚನೆ ಮೇರೆಗೆ ರಾಯಚೂರಿನ ಶಕ್ತಿನಗರದಲ್ಲಿ ಮೇ 9ರಂದು ಶುಕ್ರವಾರ ಸಂಜೆ 4.34 ರಿಂದ 4.39ರವರೆಗೆ ತುರ್ತು ಪರಿಸ್ಥಿತಿ ಎಚ್ಚರಿಕೆಯ ಸೈರನ್ ಮೊಳಗಿಸಲಾಯಿತು.

ಶಕ್ತಿನಗರದ ವಿದ್ಯುತ್ ಶಾಖೋತ್ಪನ್ನ ಕೇಂದ್ರದ ಹೆಲಿಪ್ಯಾಡ್ ಕೇಂದ್ರ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಎನ್.ಡಿ.ಆರ್.ಎಫ್, ಎಸ್.ಡಿ.ಆರ್.ಎಫ್, ಕೆ.ಪಿ.ಟಿ.ಸಿ.ಎಲ್, ಸಿ.ಐ.ಎಸ್.ಎಫ್ ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ನಾಗರಿಕ ರಕ್ಷಣಾ ಅಣಕು ಪ್ರದರ್ಶನ ಕಾರ್ಯ ಕ್ರಮದಲ್ಲಿ ಮೂರು ವಿಧದ ಸೈರನ್‌ಗಳು ಕೇಳಿಸಿದವು. ತುರ್ತು ಪರಿಸ್ಥಿತಿಯಲ್ಲಿ ಮೊದಲ ಸೈರನ್ , ಎರಡನೇ ಸೈರನ್, ಮೂರನೇ ಸೈರನ್ ಸಂದರ್ಭದ ಬಗ್ಗೆ ತಿಳಿಸಲಾಯಿತು.

ಈ ವೇಳೆ ಸೈರನ್‌ಗೆ ಹೇಗೆ ಪ್ರತಿಕ್ರಿಯಿಸಬೇಕು, ವಾಯುದಾಳಿ ಆದರೆ ಏನು ಮಾಡಬೇಕು, ಬೆಂಕಿ ಹತ್ತಿಕೊಂಡಾಗ ರಕ್ಷಣಾ ಕಾರ್ಯಾ ಚರಣೆ ಕೈಗೊಳ್ಳುವುದು ಹೇಗೆ, ಅವಶೇಷಗಳ ಅಡಿ ಸಿಲುಕಿದವರನ್ನು, ಎತ್ತರದ ಪ್ರದೇಶಗಳಲ್ಲಿ ರುವವರನ್ನು ಹೇಗೆ ರಕ್ಷಿಸಬೇಕು, ವೈದ್ಯಕೀಯ ತುರ್ತು ಸೇವೆಗಳನ್ನು ಒದಗಿಸುವುದು ಹೇಗೆ ಎಂಬುದನ್ನು ಕಲಿಸಲಾಯಿತು.





ಸೈರನ್ ಮೊಳಗಿದ ಕೂಡಲೇ ನಾಗರಿಕರು ಕೈಗೊಳ್ಳಬೇಕಾದ ಎಚ್ಚರಿಕೆ ಹಾಗೂ ದುರ್ಘಟನೆ ಯಿಂದ ಕಟ್ಟಡಗಳಲ್ಲಿ ಸಿಲುಕಿರುವ ನಾಗರಿಕರನ್ನು ಸುಸಜ್ಜಿತವಾದ ಏರಿಯಲ್ ಲ್ಯಾಡರ್ ವಾಹನದ ಮೂಲಕ ರಕ್ಷಣೆ ಮಾಡುವುದನ್ನು ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಸಿಬ್ಬಂದಿ ಪ್ರದರ್ಶಿಸಿದರು.

ರಾಯಚೂರ ಜಿಲ್ಲೆಯಲ್ಲಿ ಮೊದಲ ಬಾರಿಗೆ ನಡೆದ ಈ ಮಾಕ್ ಡ್ರಿಲ್ ನಲ್ಲಿ ಪರಿಶಿಷ್ಟ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕ ಬಸನಗೌಡ ದದ್ದಲ್, ಜಿಲ್ಲಾಧಿಕಾರಿ ನಿತೀಶ್ ಕೆ, ಜಿಲ್ಲಾ ಪಂಚಾಯತ್ ಸಿಇಓ ರಾಹುಲ್ ತುಕಾರಾಂ ಪಾಂಡ್ವೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಪುಟ್ಟಮಾದಯ್ಯ, ಅಪರ ಜಿಲ್ಲಾಧಿಕಾರಿ ಶಿವಾನಂದ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಜಿ.ಹರೀಶ್, ರಾಯಚೂರು ಸಹಾಯಕ ಆಯುಕ್ತರಾದ ಗಜಾನನ ಬಾಳೆ, ತಹಶೀಲ್ದಾರ್ ಸುರೇಶ ವರ್ಮ ಸೇರಿದಂತೆ ಇತರರು ಭಾಗಿಯಾಗಿ ಅಣುಕು ಪ್ರದರ್ಶನ ವೀಕ್ಷಣೆ ಮಾಡಿದರು.

ಶಾಸಕ ಬಸನಗೌಡ ದದ್ದಲ್ ಮಾತನಾಡಿ, >>3















## ಸರ್ಕಾರಿ ಐಟಿಐ ಕಾಲೇಜು ಪ್ರವೇಶ ಅನ್‌ಲೈನ್ ಅರ್ಜಿ ಅಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

ಸರ್ಕಾರಿ ಐಟಿಐ ಕಾಲೇಜಿನಲ್ಲಿ ಪ್ರವೇಶಕ್ಕಾಗಿ ಅನ್‌ಲೈನ್ ಮೂಲಕ ಅರ್ಜಿ ಅಹ್ವಾನಿಸಲಾಗಿದೆ. ಮೇ.9 ರಿಂದ ಮೇ.28ರವರೆಗೆ ಇಲಾಖೆ ವೆಬ್‌ಸೈಟ್ www.cite.karnataka.gov.in ಮೂಲಕ ಸ್ವತಃ ಅರ್ಜಿ ಸಲ್ಲಿಸಬಹುದಾಗಿದೆ. ಅಥವಾ ಹೊಸಪೇಟೆ ನಗರದ ಜಂಬುನಾಥಹಳ್ಳಿ ರಸ್ತೆಯಲ್ಲಿರುವ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಯಲ್ಲಿನ ಸಹಾಯವಾಣಿ ಮುಖಾಂತರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆಗೆ ಭೇಟಿ ನೀಡುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಹಂಪಿ ಟೈಮ್ಸ್ SSLC
ಮಾರ್ಗದರ್ಶಿ ಇ-ಪೇಪರ್
ಕೆಳಗಿನ ವೆಬ್‌ಸೈಟ್‌ಗೆ ಭೇಟಿ ನೀಡಿ..
www.hampitimes.com/ epaper.hampitimes.com


## ಮುಖ್ಯಪೇದೆ ಲಕ್ಷ್ಮಣ ನಾಯ್ಕ ನಿಧನ

**ಹೊಸಪೇಟೆ:** ನಗರದ ಪೊಲೀಸ್ ಇಲಾಖೆಯಲ್ಲಿ ಮುಖ್ಯಪೇದೆಯಾಗಿದ್ದ ಲಕ್ಷ್ಮಣ ನಾಯ್ಕ (42) ಅವರು ಅನಾರೋಗ್ಯದಿಂದ ಶುಕ್ರವಾರ ನಿಧನರಾದರು.



ಮೃತರಿಗೆ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಇದ್ದಾರೆ. ಮೂಲತಃ ಹೂವಿನಹಡಗಲಿ ತಾಲೂಕಿನ ದಾಸರಹಳ್ಳಿ ತಾಂಡಾದ ಲಕ್ಷಣ ನಾಯ್ಕ ಅವರು 2005ರಲ್ಲಿ ಪೊಲೀಸ್ ಇಲಾಖೆ ಸೇವೆಗೆ ಸೇರಿದ್ದರು. ಅವರು ನಗರದ ಪಟ್ಟಣ ಠಾಣೆ, ಸಂಚಾರ ಠಾಣೆ, ಗಾದಿಗನೂರು ಠಾಣೆ, ಬಡಾವಣೆ ಠಾಣೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಇವರ ಸಾವಿಗೆ ಎಸ್ಪಿ ಬಿ.ಎಲ್. ಶ್ರೀಹರಿಬಾಬು, ಎಎಸ್ಪಿ ಸಲೀಂ ಪಾಷಾ, ಡಿವೈಎಸ್ಪಿ ಮಂಜುನಾಥ ತಳವಾರ ಸೇರಿದಂತೆ ಜಿಲ್ಲೆಯ ಪೊಲೀಸ್ ಸಿಬ್ಬಂದಿ ಕಂಬನಿ ಮಿಡಿದಿದ್ದಾರೆ. ನಗರದ ಪಟ್ಟಣ ಪೊಲೀಸ್ ಠಾಣೆಯ ಕ್ವಾರ್ಟಸ್‌ನಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ದಾಸರಹಳ್ಳಿ ತಾಂಡಾದಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಯಿತು.



# ದೇಶಾದ್ಯಂತ ಆರೋಗ್ಯ ವ್ಯವಸ್ಥೆಗಳತ್ತ ಕೇಂದ್ರ ನಿಗಾ

## ಕೇಂದ್ರ ಆರೋಗ್ಯ ಸಚಿವ ಜೆ ಪಿ ನಡ್ಡಾ ಅವರ ಅಧ್ಯಕ್ಷತೆಯಲ್ಲಿ ತುರ್ತು ಆರೋಗ್ಯ ವ್ಯವಸ್ಥೆಗಳ ಸನ್ನದ್ಧತೆಯ ಉನ್ನತ ಮಟ್ಟದ ಪರಿಶೀಲನಾ ಸಭೆ

**ದೆಹಲಿ:** ಕೇಂದ್ರ ಆರೋಗ್ಯ ಸಚಿವರಾದ ಜೆ ಪಿ ನಡ್ಡಾ ಅವರ ಅಧ್ಯಕ್ಷತೆಯಲ್ಲಿ ತುರ್ತು ಆರೋಗ್ಯ ವ್ಯವಸ್ಥೆಗಳ ಸನ್ನದ್ಧತೆಯನ್ನು ಪರಿಶೀಲಿಸಲು ಆರೋಗ್ಯ ಸಚಿವಾಲಯದ ಹಿರಿಯ ಅಧಿಕಾರಿಗಳೊಂದಿಗೆ ಶುಕ್ರವಾರ ಉನ್ನತ ಮಟ್ಟದ ಸಭೆ ನಡೆಯಿತು.



ತುರ್ತು ಪ್ರಕರಣಗಳನ್ನು ಎದುರಿಸಲು ವೈದ್ಯಕೀಯ ಸನ್ನದ್ಧತೆಯ ಪ್ರಸ್ತುತ ಸ್ಥಿತಿಯ ಬಗ್ಗೆ ಅವರಿಗೆ ವಿವರಿಸಲಾಯಿತು. ಆಂಬ್ಯುಲೆನ್ಸ್ ಗಳ ನಿಯೋಜನೆ, ಉಪಕರಣಗಳು, ಔಷಧಿಗಳು, ರಕ್ತದ ಬಾಟಲಿಗಳು ಮತ್ತು ಮತ್ತಿತರ ಅಗತ್ಯ ವಸ್ತುಗಳು ಸೇರಿದಂತೆ ವೈದ್ಯಕೀಯ ಸರಬರಾಜುಗಳ ಸಮರ್ಪಕ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು, ಹಾಸಿಗೆಗಳು, ಐಸಿಯು ಮತ್ತು ಎಚ್ ಡಿ ಯು ವಿಷಯದಲ್ಲಿ ಆಸ್ಪತ್ರೆ ಸಿದ್ಧತೆ; ಬಿಎಚ್‌ಐಎಚ್‌ಎಂ ಕ್ಯೂಬ್ ಗಳ ನಿಯೋಜನೆ, ಸುಧಾರಿತ ಸಂಚಾರಿ ಆಘಾತ ಆರೈಕೆ ಘಟಕಗಳು ಇತ್ಯಾದಿಗಳ ಕುರಿತು ತೆಗೆದುಕೊಂಡ ಕ್ರಮಗಳ ಬಗ್ಗೆ ಸಚಿವರಿಗೆ ವಿವರಿಸಲಾಯಿತು.

ಆಸ್ಪತ್ರೆಗಳು ಮತ್ತು ವೈದ್ಯಕೀಯ ಸಂಸ್ಥೆಗಳು ಅಗತ್ಯ ಔಷಧಗಳು, ರಕ್ತ, ಆಮ್ಲಜನಕ, ಆಘಾತ ಆರೈಕೆ ಕಿಟ್ ಗಳು ಇತ್ಯಾದಿಗಳ ಸಮರ್ಪಕ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಸೂಚಿಸಲಾಗಿದೆ. ಏಮ್ಸ್ ನವದೆಹಲಿ ಮತ್ತು ಇತರ ಕೇಂದ್ರ ಸರ್ಕಾರಿ ಆಸ್ಪತ್ರೆಗಳು ವೈದ್ಯರು ಮತ್ತು ದಾದಿಯರನ್ನು ಸಜ್ಜುಗೊಳಿಸಿವೆ ಮತ್ತು ನಿಯೋಜನೆಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿವೆ. ತುರ್ತು ಪ್ರತಿಕ್ರಿಯೆ ಜಾಲವನ್ನು ಸಹಯೋಗದ ರೀತಿಯಲ್ಲಿ ಬಲಪಡಿಸಲು ರಾಜ್ಯ ಮತ್ತು ಜಿಲ್ಲಾಡಳಿತ, ಸಶಸ್ತ್ರ ಪಡೆಗಳು ಮತ್ತು ವೈದ್ಯರು, ದಾದಿಯರು, ಅರೆವೈದ್ಯರು, ಖಾಸಗಿ ವಲಯದ ಆಸ್ಪತ್ರೆಗಳು, ದತ್ತಿ ಸಂಸ್ಥೆಗಳು ಇತ್ಯಾದಿ ಪ್ರಾದೇಶಿಕ ಸಂಘಟನೆಗಳೊಂದಿಗೆ ಸಮನ್ವಯ ಸಾಧಿಸುವಂತೆ ಅವರಿಗೆ ಸೂಚಿಸಲಾಯಿತು.

ಹೆಚ್ಚುವರಿಯಾಗಿ, ಏಮ್ಸ್, ಪಿಜಿಐಎಂಇಆರ್, ಜಿಪ್ಮರ್ ಮತ್ತು ಇತರ ಪ್ರಮುಖ ಆಸ್ಪತ್ರೆಗಳಲ್ಲಿ ವಿಪತ್ತು ಸನ್ನದ್ಧತೆಗಾಗಿ ದೇಶಾದ್ಯಂತ ಅಣಕು ಪ್ರದರ್ಶನಗಳನ್ನು ನಡೆಸಲಾಗಿದೆ. ತುರ್ತು ಆರೋಗ್ಯ ಸೇವೆಯಲ್ಲಿ ಸಾಮರ್ಥ್ಯ ವೃದ್ಧಿಗಾಗಿ, ಭಾರತೀಯ ರೆಡ್ ಕ್ರಾಸ್ ಸೊಸೈಟಿ, ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ (ಎನ್ ಐ ಎಚ್ ಎಫ್ ಡಬ್ಲ್ಯು), ಏಮ್ಸ್ ನವದೆಹಲಿ ಮತ್ತು iGOT ಸಹಯೋಗದೊಂದಿಗೆ ಪ್ರಾಣವುಳಿಸಲು ಸಿಪಿಆರ್, ಪ್ರಥಮ ಚಿಕಿತ್ಸೆ ಮತ್ತು ಮೂಲಭೂತ ನೆರವಿಗಾಗಿ ಹೆಚ್ಚುವರಿ ತರಬೇತಿ ಮಾಡ್ಯೂಲ್ ಗಳನ್ನು ಪರಿಚಯಿಸಲಾಗುತ್ತಿದೆ. ಪರಿಣಾಮಕಾರಿ ಪ್ರತಿಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯದೊಳಗಿನ ಸಂಬಂಧಿತ ಪಾಲುದಾರರೊಂದಿಗೆ ಸುಗಮ ಸಮನ್ವಯಕ್ಕಾಗಿ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರ ಸರ್ಕಾರಿ ಆಸ್ಪತ್ರೆಗಳು ಮತ್ತು ಆರೋಗ್ಯ ಸಂಸ್ಥೆಗಳೊಂದಿಗೆ ನಡೆಸಿದ ಸರಣಿ ಸಭೆಗಳ ಬಗ್ಗೆ ಕೇಂದ್ರ ಆರೋಗ್ಯ ಕಾರ್ಯದರ್ಶಿ ಮಾಹಿತಿ ನೀಡಿದರು.

ಎಲ್ಲಾ ವೈದ್ಯಕೀಯ ತುರ್ತು ಪ್ರತಿಕ್ರಿಯೆ ಆರೋಗ್ಯ ವ್ಯವಸ್ಥೆಗಳು ಸಮರ್ಪಕವಾಗಿ ಸಜ್ಜುಗೊಂಡಿವೆ ಮತ್ತು ಎಲ್ಲಾ ಸಮಯದಲ್ಲೂ ಕಾರ್ಯನಿರ್ವಹಿಸುತ್ತಿವೆ ಎಂದು ಖಚಿತಪಡಿಸಿಕೊಳ್ಳಲು ಕೇಂದ್ರ ಆರೋಗ್ಯ ಸಚಿವರು ನಿರ್ದೇಶನ ನೀಡಿದರು. ಅಗತ್ಯವಿದ್ದಾಗ ತ್ವರಿತ ತುರ್ತು ಆರೋಗ್ಯ ಸೇವೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ರಾಜ್ಯ ಸರ್ಕಾರಗಳೊಂದಿಗೆ, ವಿಶೇಷವಾಗಿ ಜಿಲ್ಲಾ ಮಟ್ಟದಲ್ಲಿ, ವಿಶೇಷವಾಗಿ ಗಡಿ ರಾಜ್ಯಗಳೊಂದಿಗೆ ಪರಿಣಾಮಕಾರಿ ತಳಮಟ್ಟದ ಸಂಪರ್ಕಗಳನ್ನು ಸ್ಥಾಪಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲುಅವರುನಿರ್ದೇಶನನೀಡಿದರು.ಸಚಿವಾಲಯದಲ್ಲಿರುವ 24/7 ನಿಯಂತ್ರಣ ಮತ್ತು ಕಮಾಂಡ್ ಕೇಂದ್ರವು ನಡೆಯುತ್ತಿರುವ ಪ್ರಯತ್ನಗಳನ್ನು ಮೇಲ್ವಿಚಾರಣೆ ಮಾಡಬೇಕು ಮತ್ತು ಪ್ರಸ್ತುತ ಪರಿಸ್ಥಿತಿಯಲ್ಲಿ ರಾಜ್ಯಗಳನ್ನು ಬೆಂಬಲಿಸಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ಕೇಂದ್ರ ಆರೋಗ್ಯ ಸಚಿವಾಲಯವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದೆ ಮತ್ತು ಎಲ್ಲಾ ವಲಯಗಳಲ್ಲಿ ನಿರಂತರ ಆರೋಗ್ಯ ಸೇವೆಗಳು ಮತ್ತು ತುರ್ತು ಪ್ರತಿಕ್ರಿಯೆಯನ್ನು ಖಚಿತಪಡಿಸಿಕೊಳ್ಳಲು ಬದ್ಧವಾಗಿದೆ ಎಂದು ತಿಳಿಸಿದರು.

# ಮಹಾಸಾದ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ

**"ಆ ಭಾವ ಮುಕ್ತಿಗೆ ಯಾರನ್ನು ನೆನೆಯಲಿ**
**ಹೇಮರೆಡ್ಡಿಯ ಸೊಸೆ ಮಲ್ಲಮ್ಮ**
**ನೆನೆದರೆ ಕಡ್ಡಿಯಷ್ಟು ಬಂಗಾರ"**





ಡಾ.ರೇಖಾ ಪಾಟೀಲ, ರಾಯಚೂರು

14ನೇ ಶತಮಾನದ ಒಬ್ಬ ಮಹಿಳಾ ಸಂತ ಶಿರೋಮಣಿ. 600 ವರ್ಷಗಳ ಹಿಂದೆಯೇ ಶಿವಶರಣೆ ಯಾಗಿ ಸ್ತ್ರೀಕುಲ ಬೆಳಗಿದ ಮಹಾನ್ ಶಿವಶರಣೆ. ಕಲ್ಯಾಣ ಶರಣರ ಕಾಯಕ ದಾಸೋಹ ಸಂಸ್ಕೃತಿಯ ಪ್ರತಿರೂಪವಾಗಿ ಬೆಳಗಿದವಳು. ಮಲ್ಲಮ್ಮ ಸಂಘಜೀವಿ ಕೂಡು ಕುಟುಂಬಕ್ಕೆ ಒತ್ತು ನೀಡಿದವರು ವ್ಯಕ್ತಿಕೇಂದ್ರಿತವಾಗಿ ಯೋಚಿಸದೆ ಸಮಾಜದ ಹಿತಾಸಕ್ತಿಯ ಬಗ್ಗೆ ಚಿಂತಿಸಿದವಳು. ಶ್ರೀಶೈಲ ಮಲ್ಲಿಕಾರ್ಜುನನನ್ನು ತನ್ನ ಆರಾಧ್ಯ ದೈವವಾಗಿ ಆರಾಧಿಸಿ ಸಾಕ್ಷಾತ್ಕರಿಸಿಕೊಂಡ ಮಲ್ಲಮ್ಮ ಮೋಕ್ಷ ಪಡೆಯಲು ಲೌಕಿಕ ಪ್ರಪಂಚವನ್ನು ತ್ಯಾಗ ಮಾಡದೆ ಸಂಸಾರದಲ್ಲಿದ್ದುಕೊಂಡು ಸದ್ಗತಿ ಪಡೆದವರು. ತಾವು ಎಷ್ಟೇ ಕಷ್ಟ ಅನುಭವಿಸಿದರೂ ನೊಂದುಕೊಳ್ಳದೆ ಮಲ್ಲಿಕಾರ್ಜುನನನ್ನು ಪೂಜಿಸಿ ಮುಕ್ತಿ ಪಡೆದವರು. ಸಮಾಜದ ಅಂಕುಡೊಂಕುಗಳನ್ನು ತಮ್ಮ ಜೀವನದ ಅನುಸರಣೆ ಮೂಲಕ ತಿದ್ದಿದ ಕೀರ್ತಿ ಅವರಿಗಿದೆ. ಮಲ್ಲಮ್ಮಳ ಧರ್ಮನಿಷ್ಠೆ, ದೈವಭಕ್ತಿ, ತ್ಯಾಗ, ತಪಸ್ಸು ಇಂದಿನ ಸಮಾಜಕ್ಕೆ ಅನುಕರಣೀಯ. ಇಂದಿನ ಪ್ರತಿಯೊಬ್ಬ ಮಹಿಳೆ ಮಲ್ಲಮ್ಮನಂತೆ ಬದುಕಬೇಕು ಎಂದೆನಿಸದೆ ಇರದು. ತೆಲುಗು ಸಾಹಿತ್ಯಕ್ಕೆ ಮಾತ್ರವಲ್ಲ ವಿಶ್ವ ಸಾಹಿತ್ಯಕ್ಕೆ ಅಮೂಲ್ಯವಾದ ಕಾಣಿಕೆ ನೀಡಿದ ಪರಂಜ್ಯೋತಿ ವೇಮನನ ಬದುಕನ್ನು ರೂಪಿಸಿದ ಕಾರಣೀಕರ್ತಳು.

ಶರಣರು ತಮ್ಮ ಬದುಕಿನ ಅನುಭವದ ಜ್ಞಾನರಾಶಿಯನ್ನು ವಚನಗಳಲ್ಲಿ ತುಂಬಿ ಕೊಟ್ಟವರು ಆದರೆ ಹೇಮರೆಡ್ಡಿ ಮಲ್ಲಮ್ಮ ವಚನಗಳನ್ನು ರಚಿಸಲಿಲ್ಲವಾದರೂ ಅವಳ ಬದುಕೇ ಒಂದು ಬೃಹತ್ ವಚನ ಸಂಪುಟ. ಅವರ ಜೀವನ ಮೌಲ್ಯಗಳು ಮನುಕುಲಕ್ಕೆ ಅದರಲ್ಲೂ ಸ್ತ್ರೀ ಕುಲಕ್ಕೆ ಅಮೂಲ್ಯ ಕಾಣಿಕೆಗಳಾಗಿವೆ. ಮಲ್ಲಮ್ಮನ ಬದುಕನ್ನು ಸಮಗ್ರವಾಗಿ ಅರಿಯಲು ಜನಪದ ಸಾಹಿತ್ಯ ಪ್ರಮುಖ ಆಕರವಾಗಿದೆ. ಜನಪದ ಭೂಮಿಯನ್ನು ಅಗಿಯುತ್ತಾ ಹೋದಂತೆ ಅನೇಕ ಶಿವಶರಣ ಶರಣೆಯರ ಚರಿತ್ರೆಗಳ ಕುರಿತು ಹಾಡುಗಳು ರಚನೆಗೊಂಡಿರುವುದನ್ನು ಕಾಣುತ್ತೇವೆ.ಅಂತೆಯೇ ಹೇಮರೆಡ್ಡಿ ಮಲ್ಲಮ್ಮನ ಕುರಿತು ಕವಿ ಕವಿಯಿತ್ರಿಯರು ಮತ್ತು ಜನಪದರು ತ್ರಿಪದಿಗಳ ರೂಪದ ಹಾಡುಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ವ್ಯಕ್ತಿಗಳು ಏನನ್ನು

ಬರೆದಿಲ್ಲವೆಂದರೂ ಅಂಥವರ ಸುತ್ತಲೂ ವಿಶ್ವಕೋಶದ ವಿಸ್ತಾರವಾದ ಸಾಹಿತ್ಯ ಬೆಳದಿನಿಂತಿದೆ. ಬುದ್ಧ ಸ್ವತಃ ಏನು ಬರೆಯಲಿಲ್ಲ ಆದರೆ ಅವನ ಬದುಕಿನ ಸುತ್ತಲೂ ಹೆಣೆದುಕೊಂಡಿರುವ ಜಾತಕ ಕಥೆಗಳು ಮೂಲಆಕರಗಳಾಗಿವೆ. ಇಂತಹ ಅನೇಕ ಉದಾಹರಣೆಗಳು ಸಿಗುತ್ತವೆ.

**"ಮಲ್ಲಮ್ಮ ಹುಟ್ಟಲು ಬಂಜೆತನ ಅಳದಾದ**
**ಭವಿತನ ಕಳೆದು ಜಗದಾಗ! ಭಕ್ತಿಯು**
**ತುಂಬಿ ತುಂಬಿ ಹೊರಗೆ ಚೆಲ್ಯಾದ"**

ಮಲ್ಲಮ್ಮಳ ಜನನ ಬಾಲ್ಯ ತಂದೆ ತಾಯಿ ನಿಲುವು ಆದರ್ಶಗಳು ಗರತಿಯ ಹಾಡುಗಳಲ್ಲಿ ಪಡೆಯಚ್ಚಾಗಿವೆ.

ಹೇಮರೆಡ್ಡಿ ಮನೆತನ ವರಂಗಲ್ಲಿನ ತಾಕತೀಯ ಅರಸರ ಆಳ್ವಿಕೆಗೆ ಒಳಪಟ್ಟ ಆಂಧ್ರಪ್ರದೇಶ ಈಗಿನ ಶ್ರೀಶೈಲವು ಸೇರಿತ್ತು. ಸಾ. ಶ 1326ರಲ್ಲಿ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕ ಮಲ್ಲಿಕಾಫರ್‌ನ ದಕ್ಷಿಣ ಭಾರತದ ದಾಳಿಯಿಂದಾಗಿ ಕಾಕತಿಯ ಸಾಮ್ರಾಜ್ಯ ಅವನತಿ ಯಾಯಿತು. ಪ್ರತಾಪರುದ್ರದೇವನ ಸೇನಾಪತಿಯಾದ ವೇಮಾರೆಡ್ಡಿ ಸ್ವತಂತ್ರನಾಗಿ ಕೆಲವು ಪ್ರದೇಶಗಳನ್ನು ಸಾ.ಶ 1339ರವರೆಗೆ ಆಳಿದನು. ನಂತರ ವೇಮರೆಡ್ಡಿ ವಂಶಜರು ಆಳ್ವಿಕೆ ಮುಂದುವರೆಸಿದರು. ಕುಮಾರಗಿರಿ ವೇಮನರೆಡ್ಡಿ ಕಾಲಕ್ಕೆ ಶ್ರೀಶೈಲಕ್ಕೆ ಬಂದು ನೆಲೆಸಿದರು ಅವನ ಮೂರನೇ ಮಗ ಭರಮರೆಡ್ಡಿ. ದೈವಭಕ್ತಿ ಸಂಪನ್ನನಾದ ಮುಗ್ಧನು ಶಾಂತ ಸ್ವಭಾವದವನು. ಇವನ ಸತಿಯಾಗಿ ವೇಮರೆಡ್ಡಿ ಸೊಸೆಯಾಗಿ ಬಂದವಳು ಶಿವಭಕ್ತಿ ಸಂಪನ್ನೇಯಾದ ಮಲ್ಲಮ್ಮ.

**ಮಲ್ಲಮ್ಮಳ ಜನನ ಮತ್ತು ಬಾಲ್ಯ**

ಸಾ.ಶ 15ನೇ ಶತಮಾನದಲ್ಲಿ ಆಂಧ್ರಪ್ರದೇಶದ ದಕ್ಷಿಣ ಭಾಗದಲ್ಲಿ ಅನೇಕ ರೆಡ್ಡಿ ಜನಾಂಗದ ಮನೆತನಗಳು ಆಳುತ್ತಿದ್ದವು. ಆ ಮನೆತನಗಳನ್ನು ಪಕನಾಕರೆಡ್ಡಿ, ಕೊಂಡವೀಡುರೆಡ್ಡಿ, ಬಡಿಗನಾಡುರೆಡ್ಡಿ ಎಂದು ಕರೆಯುತ್ತಿದ್ದರು. ಶ್ರೀಶೈಲದ ದಕ್ಷಿಣ ಭಾಗದಲ್ಲಿರುವ ರಾಮಪುರದ ನಾಗರೆಡ್ಡಿ ಮತ್ತು ಗೌರಮ್ಮ ದಂಪತಿಗಳು ಮಲ್ಲಿಕಾರ್ಜುನನ ಪರಮ ಭಕ್ತರು. ಮಕ್ಕಳ ಭಾಗ್ಯ ಕರುಣಿಸುವಂತೆ ಮಲ್ಲಿಕಾರ್ಜುನನನ್ನು ಪ್ರಾರ್ಥಿಸಿದಾಗ ಅವರ ಭಕ್ತಿಗೊಲಿದ ಮಲ್ಲಿಕಾರ್ಜುನನ ವರವಾಗಿ ಜನಿಸಿದ ಮಗಳೇ ಮಲ್ಲಮ್ಮ. ಸಾ.ಶ 1422 ರಲ್ಲಿ ಸುಲಕ್ಷಣೆಯಾದ ಮಲ್ಲಮ್ಮ ಜನಿಸಿದಳು. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮಲ್ಲಮ್ಮ ಬಾಲ್ಯದಲ್ಲಿಯೇ ದೈವಿಭಕ್ತಳು. ದೇವರ ಪೂಜೆ ಮಾಡುವುದು ಪ್ರತಿ ಆಟದ ಗೊಂಬೆ ಕಲ್ಲು ಮಣ್ಣಿನಲ್ಲಿ ದೈವತ್ವ ಕಾಣುವಳು. ತಂದೆಯಿಂದ ಪುರಾಣ ಶಾಸ್ತ್ರ ಪುಣ್ಯಕಥೆಗಳನ್ನು ಕೇಳುತ್ತಿದ್ದಳು. ಶ್ರೀಮಂತ ಪರಿಸರದಲ್ಲಿ ಬೆಳೆದರೂ ಸದ್ಗುಣ ಸಂಸ್ಕಾರವಂತಳಾಗಿ ಬೆಳೆದಳು.

**"ಬೆಳೆದಾಳ ಮಲ್ಲಮ್ಮ ಬೆಳದಿಂಗಳ ಬೆಳೆದಾಂಗ**
**ಹಡೆದವರ ಮನ ತಂಪಾಗಿ! ಮನೆಯಾಗ**
**ಹಾಲುಕ್ಕಿ ಹರಿದು ಚೆಲ್ಯಾದ"**

ಮುಂದುವರೆದು ಬಾಲ್ಯದ ಮುಗ್ಧ ಭಕ್ತಿಯನ್ನು ಜನಪದರು ಈ ರೀತಿ ವಿವರಿಸಿದ್ದಾರೆ.

**"ಬಾಲೆ ಮಲ್ಲಮ್ಮ ಬಿಸಿಲಾಗ ಶಿವಕಂಡು**
**ತನ್ನಂಗಿ ಅದಕ ಮುಚ್ಚ್ಯಾಳ! ಶಿವನಿಗೆ**
**ನೆರಳ ಮಾಡ್ಯಾಳ ಥೆಳ್ಳಗೆ"**

ಕುಟುಂಬದ ಭಕ್ತಿ ಪರಿಸರ ಒಂದೆಡೆಯಾದರೆ 12ನೇ ಶತಮಾನದ ಶರಣರ ನಿಲುವುಗಳ ಪ್ರಭಾವವು ಇದೆ ಎನ್ನುವುದಕ್ಕೆ ಜನಪದ ಈ ಹಾಡು ಸಾಕ್ಷಿಯಾಗಿದೆ.

**"ಬಸವನ ಚರಿತೆಯು ಸದ್ದಿಲ್ಲದೆ ಕೇಳ್ಯಾಳ**
**ಬಸವನ ವಚನಕ ಸೋತಾಳ! ದಿನವೆಲ್ಲ**
**ಬಸವನ ವಚನ ನುಡಿತಾಳ"**

ಅಕ್ಕಮಹಾದೇವಿಯ ನಿಲುವಿನಲ್ಲಿ ಮಲ್ಲಮ್ಮಳು ಪ್ರಭಾವಿತಳಾಗಿದ್ದಳು ಎನ್ನುವುದಕ್ಕೆ ಈ ತ್ರಿಪದಿಯಲ್ಲಿ ಕಾಣುತ್ತೇವೆ.

**"ಮಾದೇವಿ ನಿಲುವಿಗಿ ಮಲ್ಲಮ್ಮ ಶರಣಯೋಗಿ**
**ದಿನವೆಲ್ಲಾ ಅವಳ ನೆನಸ್ಯಾಳ! ಅಕ್ಕನ**
**ಭಕ್ತಿಯ ಭಾವಕ್ಕೆ ಸೋತಾಳ"**

ಅಕ್ಕಮಹಾದೇವಿಯ ಶರಣತ್ವದ ಸಾಧನೆಯಿಂದ ಪ್ರಭಾವಿತಳಾದ ಮಲ್ಲಮ್ಮ ಸಂಸಾರದಲ್ಲಿ ಇದ್ದುಕೊಂಡೆ ಶ್ರೀಶೈಲ ಮಲ್ಲಿಕಾರ್ಜುನನನ್ನು ಆರಾಧಿಸಿ ಸಾಕ್ಷಾತ್ಕರಿಸಿಕೊಂಡು ಶಿವಶರಣೆಯರ ಸಾಲಿನಲ್ಲಿ ನಿಲ್ಲುತ್ತಾಳೆ.

**ರಾಮಪುರದಿಂದ- ಸಿದ್ದಾಪುರಕ್ಕೆ**

ತಂದೆ ತಾಯಿ ಬೆಳೆದ ಮಗಳಿಗೆ ಒಪ್ಪುವಂತಹ ಗುಣಶೀಲ ವರನಿಗಾಗಿ ಪ್ರಾರ್ಥಿಸಿದರು. ಶ್ರೀಶೈಲ ಪರ್ವತದ ಭಾಗದಲ್ಲಿರುವ ಸಿದ್ದಾಪುರ ಗ್ರಾಮದ ರೆಡ್ಡಿ ವಂಶದ ಕುಮಾರಗಿರಿರೆಡ್ಡಿ ಅರಸೊತ್ತಿಗೆ ಮೆರೆದಿತ್ತು. ದೈವಭಕ್ತನಾದ ಕುಮಾರಗಿರಿರೆಡ್ಡಿಯ ಐದು ಜನ ಗಂಡು ಮಕ್ಕಳಲ್ಲಿ ಮೂರನೇ ಮಗನೇ ಭರಮರೆಡ್ಡಿ. ವ್ಯವಹಾರದಲ್ಲಿ ಚತುರನಲ್ಲದಿದ್ದರೂ ದೈವಭಕ್ತಿ ಸಂಪನ್ನನು. ವೇಮರೆಡ್ಡಿಯ ಮಗಳಾದ ಮಲ್ಲಮ್ಮ ಮತ್ತು ಭರಮರೆಡ್ಡಿಯರ ವಿವಾಹ ಸಾ.ಶ 1444ರಲ್ಲಿ ನಡೆಯಿತು. ರಾಮಪುರದಿಂದ ಸಿದ್ದಾಪುರಕ್ಕೆ ಮಲ್ಲಮ್ಮಳ ಜೀವನದ ಮತ್ತೊಂದು ಅಧ್ಯಾಯ ತೆರೆಯಿತು. ಮಲ್ಲಿಕಾರ್ಜುನನ ಸ್ಮರಣೆಯೊಂದಿಗೆ ಪತಿಯ ಮನೆಯಲ್ಲಿ ಸತ್ಯ ಶುದ್ಧ ಮನಸ್ಸಿನಿಂದ ಹಿರಿಯರ ಸೇವೆ ಮಾಡಿದಳು. ಪರರನ್ನು ನಿಂದಿಸದೆ ಸುಳ್ಳು ಮಾತನಾಡದೆ ಬಂದ ಕಷ್ಟಗಳನ್ನು ದಾಟಿದಳು. ಭಿಕ್ಷುಕರನ್ನು ಕಡೆಗಣಿಸದೆ ಸಂತೈಸಿದಳು. ದನಕಾಯುವ ಕೆಲಸದಲ್ಲಿಯೂ ಸಂತೋಷಪಡುವ ಮಲ್ಲಮ್ಮ ಜನರ ಪ್ರೀತಿಗೆ ಪಾತ್ರಳಾದಂತೆ ಅತ್ತೆ, ನಾದಿನಿ, ನೆಗೆಣ್ಣಿಯರ ಕೆಂಗಣ್ಣಿಗೆ ಗುರಿಯಾಗಿ ಅಸೂಯೆ ಹೆಚ್ಚಿತು.

**"ಹುಚ್ಚು ಗಂಡನೆಂದು ಉಸಿರು ಹಾಕಲಿಲ್ಲ**
**ಅತ್ತೆಯ ಹಿಂಸೆಗೆ ಪ್ರತಿ ಎಂದು ಆಡಲಿಲ್ಲ**
**ಬಿಕ್ಷಗಳನೆಂದೂ ಬರಿಗೈಲಿ ಕಳಿಸಲಿಲ್ಲ**
**ಉಪವಾಸವಿದ್ದರೂ ಸಹ ತನ್ನ ಧರ್ಮ ಬಿಡಲಿಲ್ಲ".**

ಮುಗ್ಧಗಂಡ ಚಾಡಿ ಮಾತುಗಳು ಬಿಡವಿಲ್ಲದ ದಿನವಿಡೀ ಕೆಲಸಗಳು ತಂಗಳೂಟದ ಕಷ್ಟದ ಪರಂಪರೆಯಲ್ಲಿಯೂ ಸಹನಾ ಮೂರ್ತಿಯಾಗಿ ನಗುನಗುತ್ತಾ ಬಾಳುತ್ತಿದ್ದಳು. ಕೌಟುಂಬಿಕ ವಿಷಯದಲ್ಲಿ ನೆರೆಹೊರೆಯವರ ವಿಷಯದಲ್ಲಿ ಮಲ್ಲಮ್ಮ ಎಲ್ಲರ ಮನದ ಮಲ್ಲಿಗೆಯಾಗಲು ಕಾರಣ ಅವಳ ತಾಳ್ಮೆಯೇ ಸಾಕ್ಷಿ.

**ಪವಾಡಗಳು**

ಮಲ್ಲಮ್ಮಳ ಅತ್ತೆ ಆಕೆಗೆ ಉಣ್ಣುವುದಕ್ಕೆ ಉಡುವುದಕ್ಕೆ ಸರಿಯಾಗಿ ಕೊಡದೆ ಅವಳನ್ನು ಅಡವಿಗೆ ಕಳಿಸಿ ಸಂಕಷ್ಟಗಳ ಸಂಕೋಲೆಗೆ ತಳ್ಳಿದಳು. ಆದರೂ ಮಲ್ಲಮ್ಮ ನಂದು ಕೊಳ್ಳದೆ ಕಾಡಿನಲ್ಲಿ ದನಗಳನ್ನು ಕಾಯಿಸುತ್ತಾ ಮಲ್ಲಿಕಾರ್ಜುನನ ಉಪಾಸಣೆಯಲ್ಲಿ ಮಗ್ನಳಾಗಿರುತ್ತಿದ್ದಳು.

**ಬೆಂಕಿ ದಾನದ ಮಲ್ಲಮ್ಮ**

ಮಲ್ಲಮ್ಮಳಿಗೆ ಬುದ್ಧಿ ಕಲಿಸಲು ಅವಳ ಅತ್ತೆ ಮನೆಯ ಮುಂದೆ ಬಿಕ್ಷುಕ ಬಂದಾಗ ಸಿಟ್ಟುಗೊಂಡು ಒಲೆಯಲ್ಲಿನ ನಿಗಿ-ನಿಗಿ ಕೆಂಡವನ್ನು ಅವಳ ಬೊಗಸೆಗೆ ಹಾಕಿ ಭಿಕ್ಷುಕನಿಗೆ ನೀಡಲು ಹೇಳಿದಾಗ ಮಲ್ಲಮ್ಮ ಆ ಕೆಂಡವನ್ನು ಸ್ವೀಕರಿಸಿ ಮನದಲ್ಲಿ ಮಲ್ಲಿಕಾರ್ಜುನನನ್ನು ನೆನೆದು ಬಿಕ್ಷಾರ್ಥಿಯ ಜೋಳಿಗೆಗೆ ಹಾಕಿದಾಗ ಅದು ಧಾನ್ಯವಾಗಿ ಮಾರ್ಪಡುತ್ತದೆ. ಅಂದಿನಿಂದ ಮಲ್ಲಮ್ಮ ಬೆಂಕಿ ದಾನದ ಮಲ್ಲಮ್ಮಳಾಗಿ ಹೆಸರಾದಳು.

**ಮೈದುನನ ಮನ ಪರಿವರ್ತನೆ**

ದುಶ್ಚಟಗಳ ದಾಸನಾದ ವೇಮನ ವೇಷ್ಯಾ ಸ್ತ್ರೀಯೊಬ್ಬಳ ಮನದಾಸೆ ಈಡೇರಿಸಲು ಅತ್ತಿಗೆಯಾಗಿದ್ದ ಮಲ್ಲಮ್ಮನ ಮೂಗುತಿಯನ್ನು ಬೇಡುತ್ತಾನೆ. ವೇಮನನಿಗೆ ಕೊಡಲು ಒಪ್ಪಿದ ಮಲ್ಲಮ್ಮ ಕರಾರೊಂದನ್ನು ವಿಧಿಸುತ್ತಾಳೆ. ಅದೇನೆಂದರೆ ಮೂಗುತಿ ಕೊಡುವಾಗ ಆಕೆ ನಗ್ನಳಾಗಿ ಬಂದು ವಿಮಾನ ಮಂಚವನ್ನು ಮೂರು ಸುತ್ತು ಸುತ್ತಬೇಕು. ಮೂಗುತಿ ಪಡೆಯುವವರೆಗೆ ತಲೆಗೆ ಚಿತ್ತನಾಗಿ ಅವಳನ್ನು ನೋಡಬೇಕು ಎಂದಾಗ ವೇಮನ ಒಪ್ಪುತ್ತಾನೆ. ಅದರಂತೆ ನಗ್ನ ಪ್ರೇಯಸಿಯನ್ನು ಕಂಡೊಡನೆ ಅವನಲ್ಲಿ ಭಯಂಕರ ಜಿಗುಪ್ಸೆ ಅಸಹ್ಯ ಭಾವನೆ ಆವರಿಸಿ ಒಡನೆ ಅಲ್ಲಿಂದ ಕಾಲ್ತೆಗೆದು ತತ್ವಜ್ಞಾನ ಹೇಳುತ್ತಾ ತಾನು ವೈರಾಗಿಯಂತೆ ಹೊರಟು ಮುಂದೆ ತನ್ನ ಸಾಧನೆಯಿಂದ ಮಹಾ ಯೋಗಿಯಾದನು.

**ಭಕ್ತಿಗೊಲಿದ ಭಗವಂತ**

ಮಲ್ಲಮ್ಮನ ಇಹಲೋಕ ಯಾತ್ರೆ ಮುಗಿಸುವ ಮೊದಲು ಆಕೆಯ ನಿಷ್ಕಳಂಕ ಭಕ್ತಿಗೆ ಮನಸೋತು ಮಲ್ಲಿಕಾರ್ಜುನನು ದರ್ಶನ ನೀಡಿ, ವರವೇನು ಬೇಕು? ಕೇಳು ಎಂದಾಗ ಮಲ್ಲಮ್ಮ ತನ್ನ ಬಳಗಕ್ಕೆಂದೂ ಬಡತನ ಬಾರದಿರಲಿ. ಅವರಿಗೆಂದೂ ಉಣ್ಣಲು ಉಡಲು ತೊಡಲು ಯಾವ ಕೊರತೆ ಆಗದಿರಲಿ. ಎಂದು ವರವನ್ನು ಪಡೆಯುತ್ತಾಳೆ.

**ಬಡ್ಡಿ ಸಣ್ಣದಲ್ಲ ರೆಡ್ಡಿ ದಡ್ಡನಲ್ಲ**
**ನಿತ್ಯ ಕಾಯಕ ನೀಗಿಸಿ ಸತ್ಯ ತೋರಿಸಿ**
**ರಟ್ಟೆ ಮುರಿದು ದುಡಿಯುವವರಿಗೆಲ್ಲ**
**ರೆಡ್ಡಿ ಬಂಗಾರದ ಕಡ್ಡಿ**

**ರೆಡ್ಡಿ ಕುಲದ ಆರಾಧ್ಯ ದೈವಳಾಗಿ, ಕುಲದೇವತೆಯಾಗಿದ್ದಾಳೆ. ರೆಡ್ಡಿ ಕುಲಕ್ಕೆ ಸಿರಿ ತಂದವಳು.**

ಮುಂದುವರೆದು ಮಲ್ಲಮ್ಮ ಸಂಪತ್ತಿಗೆ ಸೊಕ್ಕಬೇಡಿ. ಸಿರಿ ಬಂದ ಕಾಲಕ್ಕೆ ಮೈಮರೆತು ಹಿಗ್ಗದೆ ದಾನ ಧರ್ಮ ಮಾಡುವುದರ ಮೂಲಕ ದಾಸೋಹ ಮನೋಭಾವ ತನ್ನ ಬಳಗದವರು ಬೆಳೆಸಿಕೊಳ್ಳಬೇಕೆಂದು ಬುದ್ದಿವಾದ ಹೇಳಿದ್ದಾಳೆ. ಮಲ್ಲಿಕಾರ್ಜುನನ ಪೂಜೆ ಜಾತ್ರೆ ಉತ್ಸವಗಳು ನಿರಂತರವಾಗಿ ನಡೆಯಲಿ ಎನ್ನುತ್ತಾಳೆ.

ಶಿವ ಕರೆದ ಕಾಲಕ್ಕೆ ಮ್ಯಾಲಕ ಹೋಗಾಗ
ನಾಕು ಮಂದಿ ಕಳಸಾಕ
ಬರುವಂಗ ಇರಬೇಕು ಎನ್ನುವ ಈಕೆಯ ಬಾಳು ಪವಿತ್ರ ಮೌಲ್ಯಗಳ ಆಗರ ಅತ್ಯಮೂಲ್ಯ ಕಣಜವಾಗಿದೆ.

**"ಮಾದೇವಿ ನಿನ ಹೊರತು ನಾನ್ಯಾರ ನಂಬಿಲ್ಲ**
**ನಾ ಮಾಡನೆಂಬ ಅಳವಿಲ್ಲ! ಮಲ್ಲಯ್ಯ**
**ನೀನಡೆಸು ನನ್ನ ತರುವೆಲ್ಲ"**

ಮಲ್ಲಿಕಾರ್ಜುನನಲ್ಲಿ ಇರುವ ಭಕ್ತಿ ಸರ್ವ ಸಮರ್ಪಣಾ ಭಾವ ವಿನೀತ ಭಾವ ಅವಳದು. ಅವನಲ್ಲಿ ನಿಷ್ಠೆ ಇಟ್ಟು ಸಾಗಿದ್ದರಿಂದಲೇ ಮಲ್ಲಮ್ಮನಂಥ ಸೊಸೆಯಿಲ್ಲ ಎಂಬ ಹಾಡಿಗೆ ವಸ್ತುವಾದಳು. ಹೇಮರೆಡ್ಡಿ ಮಲ್ಲಮ್ಮನ ಬಗೆಗೆ ಬೆಳೆದಬಂದ ಜನಪದ, ಸಾಹಿತ್ಯ, ಲಾವಣಿ, ಗೀಗಿ ಪದಗಳು, ಹಂತಿಯ ಹಾಡುಗಳು, ಮಂಗಳಾರತಿ ಹಾಡುಗಳು, ಸುಪ್ರಭಾತಗಳು ಇಂದು ನೆನಪಿಗೆ ಬರುತ್ತವೆ.

ಒಟ್ಟಾರೆ ಹೇಮರೆಡ್ಡಿ ಮಲ್ಲಮ್ಮ ಸಿದ್ದಾಪುರದ ಸೊಸೆಯಾಗಿ ಶ್ರೀಶೈಲ ಮಲ್ಲಿಕಾರ್ಜುನನನ್ನು ಪೂಜಿಸಿ ಅತ್ತೆ ಮನೆಯವರ ಪಾಠ ಸಹಿಸಿ ಮಬ್ಬು ಗಂಡನ ಮಹಾದೇವನೆಂದು ಮನ್ನಿಸಿ ಮತಿಗೇಡಿ ಮೈದುನನ ಯೋಗಿ ವೇಮನನ ಮಾಡಿ ಮಹಾಯೋಗಿಯ ಮಹಾತಾಯಿಯಾಗಿ ಬೆಳಗಿದಳು ತಾಯಿ ಮಲ್ಲಮ್ಮ.

ದಿನ ಬೆಳಗಾದರೆ ವಿವಾಹ ವಿಚ್ಛೇದನ ಹೆಚ್ಚುತ್ತಿರುವ ಪ್ರಸ್ತುತ ದಿನಗಳಲ್ಲಿ ಹೆಣ್ಣು ಸಂಸಾರದ ಕಣ್ಣು ಎನ್ನುವ ಮಾತಿಗೆ ಪ್ರತಿರೂಪವಾಗಿ ನಮಗೆಲ್ಲ ಮಲ್ಲಮ್ಮ ಆದರ್ಶಪ್ರಾಯ. ಮಹಾತ್ಮ ಗಾಂಧೀಜಿಯವರಿಗೆ ಕಸ್ತೂರಿಬಾ, ಡಾ. ಬಿ ಆರ್ ಅಂಬೇಡ್ಕರ್ ಅವರಿಗೆ ರಮಾಬಾಯಿ, ರಾಮಕೃಷ್ಣ ಪರಮಹಂಸರಿಗೆ ಶಾರದಾದೇವಿ, ಇವರೆಲ್ಲ ಆದರಣೀಯರು. ಶಿಕ್ಷಣ ಪಡೆದು ಪುರುಷನಿಗೆ ಸರಿ ಸಮಾನವಾಗಿ ಎಲ್ಲ ಕ್ಷೇತ್ರಗಳಲ್ಲಿ ಸಾಧನೆಗೈಯುತ್ತ ಇತಿಹಾಸ ನಿರ್ಮಿಸುತ್ತಿರುವ ಸ್ತ್ರೀಯರು ಚಂದ್ರಲೋಕ ಸಮುದ್ರದ ಅಳಕ್ಕೂ ತಮ್ಮ ಕೈ ಚಾಚಿದ್ದಾರೆ. ಪ್ರತಿ ವರ್ಷ ಭಾರತದಲ್ಲಿ ಐಎಎಸ್ ಇನ್ನಿತರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಣ್ಣು ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆಯಾಗುತ್ತಿದ್ದಾರೆ ಇದು ಅತ್ಯಂತ ಹೆಮ್ಮೆಯ ಸಂಗತಿ. ಆದರೆ ಸಣ್ಣ ಪುಟ್ಟ ಮನಸ್ತಾಪಗಳಿಗೆ ಕುಟುಂಬಗಳು ಒಡೆಯುತ್ತಿರುವ ಚಿತ್ರಣವು ಕಣ್ಮುಂದೆ ಇದೆ. ಸಾಧನೆಯ ಹೆಜ್ಜೆಗಳಿಗೆ ಜೊತೆಯಾಗಿ ಸಾತ್ವಿಕ ಸಂಸ್ಕಾರಗಳು ಸದ್ಗುಣಗಳು ಜೊತೆಯಾಗಲಿ. ಮನ-ಮನೆ, ಕುಟುಂಬ, ಸಮಾಜ, ದೇಶ ಎಲ್ಲಾ ಹಂತಗಳಲ್ಲಿ ಅವಳ ವ್ಯಕ್ತಿತ್ವ ಬೆಳಗುವಂತಾಗಲಿ. ಆಗಲೇ ಹೇಮರೆಡ್ಡಿ ಮಲ್ಲಮ್ಮನಂತಹ ಮಹಾಸಾದ್ವಿ ಶಿರೋಮಣಿಯರ ಜಯಂತಿಗಳಿಗೆ ನಿಜವಾದ ಅರ್ಥ ಸಿಗುತ್ತದೆ.


## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**- ಜಾಹೀರಾತು ವ್ಯವಸ್ಥಾಪಕರು.**


# ಮಕ್ಕಳಲ್ಲಿ ವಚನ ಪಠಣ ಹೆಚ್ಚಿಸಿ ಸುಸಂಸ್ಕೃತರನ್ನಾಗಿಸಿ

**■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಮಹಾಸಾದ್ವಿ ಹಾಗೂ ಮಲ್ಲಮ್ಮನಂತಹ ಭಕ್ತರಿಲ್ಲ ಎಂದು ಹೂವಿನಹಡಹಲಿ ತಾಲೂಕಿನ ಹಿರೇಮಲ್ಲನಕೆರೆಯ ವಿರಕ್ತಮಠದ ಅಭಿನವ ಚನ್ನಬಸವ ಸ್ವಾಮೀಜಿ ಹೇಳಿದರು.



ತಾಲೂಕಿನ ಕನ್ನಿಹಳ್ಳಿ ಗ್ರಾಮದಲ್ಲಿ ಕಳೆದ ಒಂದು ವಾರದಿಂದ ನಡೆಯುತ್ತಿರುವ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನ 598ನೇ ಜಯಂತೋತ್ಸವ ನಿಮ್ಮಿತ್ತ, ಮಲ್ಲಮ್ಮ ದೇವಸ್ಥಾನ ಟ್ರಸ್ಟ್ ಹಾಗೂ ಸೇವಾ ಸಮಿತಿಯಿಂದ ಹಮ್ಮಿಕೊಂಡಿದ್ದ, ಮಲ್ಲಮ್ಮ ಪುರಾಣದ 7ನೇ ದಿನವಾದ ಬುಧವಾರ ರಾತ್ರಿ, ಪುರಾಣ ಹಾಗು ಮಕ್ಕಳಿಂದ ವಚನಾ ಸ್ಪರ್ಧೆಯ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಮಾತನಾಡಿದರು.

ಮಕ್ಕಳಿರುವಾಗಲೇ ವಚನಗಳು, ಭಕ್ತಿ ಗೀತೆಗಳನ್ನು ಕಲಿಸಿಕೊಡುವ ಪರಿಪಾಠವನ್ನು ರೂಢಿಸಿ, ದೇಗುಲಗಳತ್ತ ಮಕ್ಕಳನ್ನು ಕರೆ ತನ್ನಿ, ಶಿವಶರಣೆ ಮಲ್ಲಮ್ಮ, ವೀರರಾಣಿ ಕಿತ್ತೂರು ಚನ್ನಮ್ಮ ಸೇರಿದಂತೆ ನಾನಾ ಸಾಧಕರ ಕಥೆಗಳನ್ನು ಹೇಳುವ ಮೂಲಕ ಮಕ್ಕಳನ್ನು ಸುಸಂಸ್ಕೃತರನ್ನಾಗಿ ಮಾಡಿ ಎಂದು ಕರೆನೀಡಿದರು.

ಇದೇ ವೇಳೆ 32ಕ್ಕೂ ಹೆಚ್ಚು ಮಕ್ಕಳು ವಚನ ಸ್ಪರ್ಧೆಯಲ್ಲಿ ಪಾಲ್ಗೊಂಡರು. ಶಾಲಾ ರಜೆ ಮತ್ತು ಜಯಂತಿ ಹಿನ್ನೆಲೆಯಲ್ಲಿ ಗ್ರಾಮಕ್ಕೆ ದೂರದ ಊರುಗಳಿಂದ ಧಾರವಾಡ, ಲಕ್ಷ್ಮೇಶ್ವರ, ಗದಗ, ಹುಬ್ಬಳ್ಳಿಗಳಿಂದ ಆಗಮಿಸಿದ್ದ ಚಿಣ್ಣರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಚನಗಳನ್ನು ಪ್ರಸ್ತುತ ಪಡಿಸಿದರು.

ಕಿತ್ತೂರು ರಾಣಿ ಚೆನ್ನಮ್ಮ ಶಾಲೆಯ ಸಂಗೀತ ಶಿಕ್ಷಕ ಮೋರಗೆರೆ ಯುವರಾಜಗೌಡ್ರು ಸಂಗೀತ ನೀಡಿದರೆ, ಅಕ್ಕಸಾಕಿ ಕೃಷ್ಣಾಚಾರಿ ತಬಲ ಸಾಥ್ ನೀಡಿದರು.

ಸೇವಾ ಸಮಿತಿಯ ಅಧ್ಯಕ್ಷ ಎ.ಟಿ.ಹನುಮನಗೌಡ, ನಿರ್ದೇಶಕ ಡಿ.ಉಮಾಪತಿ, ಗ್ರಾಪಂ ಅಧ್ಯಕ್ಷ ಕೆ.ಸುರೇಶ, ಸದಸ್ಯ ಮಲ್ಲಿಕಾರ್ಜುನ, ಮಾಜಿ ಸದಸ್ಯ ವಸಂತಕುಮಾರ್, ಪುರಾಣ ಸೇವಾ ಸಮಿತಿ ಅಧ್ಯಕ್ಷ ಜಿ.ಸಣ್ಣನಿಂಗಪ್ಪ, ಗೌರವ ಅಧ್ಯಕ್ಷ ಕೆ.ವಿ.ಪ್ರಶಾಂತ, ಪೂಜಾರಿ ಹಾಲಸ್ವಾಮಿ, ಸ್ಪರ್ಧೆಯ ನಿರ್ಣಾಯಕರಾದ ಪಂಚಮಸಾಲಿ ಪಿಯು ಕಾಲೇಜ್ ಪ್ರಾಂಶುಪಾಲರಾದ ಎನ್.ದೇವರಾಜ, ನಿವೃತ್ತ ಶಿಕ್ಷಕ ರಾಮನಗೌಡ್ರು, ಅಂಬಳಿ ಕಲ್ಲೇಶ, ಗ್ರಾಮಲೆಕ್ಕಾಧಿಕಾರಿ ಯಂಕಾರೆಡ್ಡಿ ಸೇರಿ ಇತರರಿದ್ದರು. ಶಿಕ್ಷಕ ಲೋಕನಗೌಡ ನಿರ್ವಹಿಸಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಪ್ರತೀಕಾರ



ಮತಿಕೆಟ್ಟು ಅಳಿಸಿದಿರಿ
ಸತಿಯರದು ಸಿಂಧೂರ
ಗತಿಯೀಗ ಏನಾಯ್ತು ನಿಮ್ಮದಿಂದು
ಅತಿಯಾದ ಸೊಕ್ಕಿನಲಿ
ಮತಿಗೇಡಿ ನೀವಾಗಿ
ಮತವೀಗ ಕಾಯುವುದೆ ನಿಮ್ಮನಿಂದು

ಅಪ್ಸರೆಯ ಗುಂಗಿನಲೊ
ಮತ್ಸರದ ಸುಳಿಯಲ್ಲೊ
ಕುತ್ಸಿತದ ನೆತ್ತರದು ತುಂಬಿ ತುಳುಕಿ
ಕುತ್ಸಿತದ ಮನದಲ್ಲಿ
ಉತ್ಸುಕವ ತೋರಿದಿರಿ
ಸತ್ಸಂಗ ಇಲ್ಲದೆಯೆ ಕೊಳಕು ಕೆದಕಿ

ನಿಮ್ಮ ನೆಲೆ ಅರಸಿರುವ
ನಮ್ಮದಿದು ಕ್ಷಿಪಣಿಗಳು
ನೆಮ್ಮದಿಯು ನಿಮಗೆಲ್ಲಿ ಇನ್ನು ಮುಂದೆ
ಹಮ್ಮಿನಲಿ ಮೆರೆದಾಡಿ
ಗುಮ್ಮನಾದಿರಿ ಜಗಕೆ
ನಮ್ಮ ಗುರಿ ನಿಮ್ಮಳಿವು ಕಣ್ಣ ಮುಂದೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

# ಭೂಮಿಯ ಕಕ್ಷೆ ಬದಲಾದರೆ ?

ತಾಯಿಯೊಂದಿಗೆ ಸಮುದ್ರದ ದಂಡೆಗೆ ಹೋಗಿದ್ದ ಶ್ರೀಕರ, ಕಡಲಕಿನಾರೆಯ ಸೊಬಗನ್ನು ಕಣ್ತುಂಬಿಕೊಂಡಿದ್ದ. ಸಮುದ್ರದ ಅಲೆಗಳಲ್ಲಿ ಆಟವಾಡುತ್ತಾ ಈಜಾಡುತ್ತಿದ್ದ. "ಅಮ್ಮ ಈ ಸಮುದ್ರದ ದಂಡೆ ಎಷ್ಟೊಂದು ಸುಂದರವಾಗಿದೆ ಅಲ್ವಾ. ರಜೆಯಲ್ಲಿ ಮಜಾ ಮಾಡಲು ಇದೊಂದು ಅತ್ಯದ್ಭುತ ಸ್ಥಳ. ಪ್ರತಿವರ್ಷ ನನ್ನ ಇಲ್ಲಿಗೆ ಕರ್ಕೊಂಡು ಬರ್ತೀಯಾ ಅಮ್ಮಾ?" ಎಂದು ಗೋಗರೆದ. ಮಗನ ಮಾತಿಗೆ ನಗುತ್ತಾ 'ಶ್ರೀ ಪ್ರತಿ ರಜೆಗೆ ನಾವು ಇಲ್ಲಿಗೆ ಬಂದರೆ ಉಳಿದ ಸ್ಥಳಗಳನ್ನು ನೋಡೋಕಾಗಲ್ಲ. ಅದ್ಕೆ ಪ್ರತಿ ರಜೆಯಲ್ಲೂ ನಾವು ಬೇರೆ ಬೇರೆ ಸ್ಥಳಗಳಿಗೆ ಹೋಗೋಣ' ಎಂದರು ಅಮ್ಮ. "ಅಮ್ಮಾ ಭೂಮಿಯ ಮೇಲೆ ಇದಕ್ಕಿಂತ ಸುಂದರವಾದ ತಾಣಗಳಿವೆಯೇ" ಎಂದು ತನ್ನ ಮನದಲ್ಲಿ ಮೂಡಿದ ಪ್ರಶ್ನೆಯನ್ನು ಕೇಳಿದ. 'ಹೌದು ಪುಟ್ಟ. ನಾವು ವಾಸಿಸುವ ಭೂಗ್ರಹ ಅತ್ಯದ್ಭುತ ಸ್ಥಳ. ಅನೇಕ ವಿಸ್ಮಯಗಳನ್ನು ಒಳಗೊಂಡ ಚಾರಿತ್ರಿಕ ತಾಣ. ಚರಿತ್ರೆಯ ಮೆಟ್ಟಿಲುಗಳಿಂದ ಆಧುನಿಕ ಸ್ಕೈಸ್ಕ್ರೇಪರ್‌ವರೆಗೆ ಸಾಕಷ್ಟು ಅಭಿವೃದ್ಧಿ ಹೊಂದಿದೆ. ಭೂಮಿಯ ಮೇಲಿನ ಚಿತ್ರವಿಚಿತ್ರಗಳನ್ನು ಪಟ್ಟಿ ಮಾಡುತ್ತಾ ಹೋದರೆ ಅದೊಂದು ಉದ್ಗ್ರಂಥವಾಗುತ್ತದೆ. ನಾವು ಒಂದು ದಿನ ಇಲ್ಲಿರ್ತೇವೆ. ನಾಳೆ ಪುನಃ ಕೆಲಸದ ನಿಮಿತ್ತ ಬೇರೆ ಕಡೆ ಚಲಿಸ್ತೇವೆ. ಹಾಗೆಯೇ ಪ್ರತಿದಿನ ನಾವು ಅನೇಕ ಚಲನೆಗಳ ಬಗ್ಗೆ ಮಾತನಾಡುತ್ತೇವೆ ಮತ್ತು ನೋಡುತ್ತೇವೆ. ಆದರೆ ನಾವು ನೆಲೆನಿಂತ ನೆಲದ ಚಲನೆಯನ್ನು ನೆಲೆನಿಂತಲ್ಲೆ ಇನ್ನೂ ನೋಡಲು ಸಾಧ್ಯವಾಗುತ್ತಿಲ್ಲ. ನಮ್ಮ ಗ್ರಹ ನಿರಂತರವಾಗಿ ತನ್ನ ಸುತ್ತ ಸುತ್ತುತ್ತ, ಸೂರ್ಯನ ಸುತ್ತ ಸುತ್ತುತ್ತಲೇ ಇದೆ. ಆದರೆ ಬಹುತೇಕವಾಗಿ ಈ ಸುತ್ತುವಿಕೆ ನಮ್ಮ ಗಮನಕ್ಕೆ ಬರುವುದೇ ಇಲ್ಲ' ಎಂದು ತಮ್ಮ ಪಾಠ ಶುರುಮಾಡಿದರು. "ಅಮ್ಮ ಒಂದುವೇಳೆ ಭೂಮಿಯ ಕಕ್ಷೆ ಬದಲಾದರೆ ಏನಾಗುತ್ತೇ?" ಎಂದು ಶ್ರೀಕರ ಪ್ರಶ್ನಿಸಿದ. ಈ ಪ್ರಶ್ನೆ ನಿಮ್ಮದೂ ಆಗಿದ್ದರೆ ಶ್ರೀಕರನ ತಾಯಿಯ ಉತ್ತರಕ್ಕಾಗಿ ಮುಂದೆ ಓದಿ.

ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಮೊದಲು ಕಕ್ಷೆ ಎಂದರೇನು? ಎಂದು ತಿಳಿಯುವುದು ಅವಶ್ಯಕ. ಸೌರವ್ಯೂಹದ ಪ್ರತಿಯೊಂದು ಗ್ರಹವೂ ಸಹ ಸೂರ್ಯನ ಸುತ್ತ ಸುತ್ತುತ್ತವೆ. ಇದಕ್ಕೆ ಕಾರಣ ಸೂರ್ಯನ ಗುರುತ್ವ. ಇದುವರೆಗೂ ಸೂರ್ಯನ ಗುರುತ್ವದ ಹಿಡಿತದಿಂದ ಯಾವ ಗ್ರಹವೂ ಸಹ ತಪ್ಪಿಸಿಕೊಂಡು ಹೋಗಲು ಸಾಧ್ಯವಾಗಿಲ್ಲ. ಒಂದು ವೇಳೆ ಹೋದರೆ ಅದು ಈ ಸೌರವ್ಯೂಹದ ಗ್ರಹ ಎಂದು ಪರಿಗಣಿತವಲ್ಲ.

ಪ್ರತಿಗ್ರಹವೂ ಒಂದು ನಿರ್ದಿಷ್ಟ ಮಾರ್ಗ(ಹಾದಿ)ದಲ್ಲಿ ಸೂರ್ಯನನ್ನು ಸುತ್ತುತ್ತವೆ. ಈ ಮಾರ್ಗವನ್ನೇ ಕಕ್ಷೆ ಅಥವಾ ಪಥ ಎಂದು ಕರೆಯುತ್ತಾರೆ. ಪ್ರತಿಯೊಂದು ಗ್ರಹವೂ ಕೂಡಾ ನಿಯಮಿತವಾಗಿ ಅದೇ ಮಾರ್ಗದಲ್ಲಿ ಪುನಾವರ್ತಿತವಾಗಿ ಚಲಿಸುತ್ತಲೇ ಇರುತ್ತದೆ. ಸೂರ್ಯನಿಗೆ ಗ್ರಹಗಳಿರುವಂತೆ ಕೆಲವು ಗ್ರಹಗಳಿಗೆ ಸ್ವಾಭಾವಿಕ ಉಪಗ್ರಹಗಳಿವೆ. ಇವುಗಳು ಸಹ ತಮ್ಮ ಗ್ರಹವನ್ನು ನಿರ್ದಿಷ್ಟ ಕಕ್ಷೆಯಲ್ಲಿ ಸುತ್ತುತ್ತವೆ. ಕಕ್ಷೆಯ ಆಕಾರ ವಿಭಿನ್ನವಾಗಿರುತ್ತದೆ. ಕೆಲವು ವೃತ್ತಾಕಾರ, ಕೆಲವು ಧೀರ್ಘವೃತ್ತಾಕಾರ, ಇನ್ನು ಕೆಲವು ಅಂಡಾಕಾರದ ಪಥ ಹೊಂದಿವೆ. ನಮ್ಮ ಭೂಮಿಯ ಕಕ್ಷೆಯು ಅಂಡಾಕಾರ ಅಥವಾ ಧೀರ್ಘವೃತ್ತಾಕಾರವಾಗಿದೆ. ಭೂಮಿಯ ಕಕ್ಷೆಯ ಉದ್ದ 93,98,66,400 ಕಿ.ಮೀ. ಅಂದರೆ ಭೂಮಿ ಸೂರ್ಯನ ಸುತ್ತ ಸುತ್ತುವ ದಾರಿಯ ಉದ್ದ 93,98,66,400 ಕಿ.ಮೀ. ಆಗಿದೆ. ಇಷ್ಟು ದೂವರನ್ನು ಕ್ರಮಿಸಲು ಭೂಮಿ ತೆಗೆದುಕೊಳ್ಳುವ ಅವಧಿ 365 ದಿನ ಅಥವಾ 1 ವರ್ಷ. ಭೂಮಿ ತನ್ನ ಕಕ್ಷೆಯಲ್ಲಿ ಸುತ್ತುವಾಗ ಜನವರಿ 3 ರಂದು ಸೂರ್ಯನಿಗೆ ಅತ್ಯಂತ ಸಮೀಪದಲ್ಲಿ (14,70,97,800 ಕಿ.ಮೀ) ಹಾಗೂ ಜುಲೈ 4 ರಂದು ಅತ್ಯಂತ ದೂರದಲ್ಲಿ (15,20,98,200 ಕಿ.ಮೀ) ಚಲಿಸುತ್ತದೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಈಗ ನಾವು ನಮ್ಮ ಮುಖ್ಯ ಪ್ರಶ್ನೆಗೆ ಬರೋಣ. ಅನೇಕ ವಿಸ್ಮಯಗಳ ಆಗರವಾದ ಭೂಮಿ ತನ್ನ ಕಕ್ಷೆ ಬದಲಿಸಿದರೆ ಏನಾಗುತ್ತೆ? ಎಂಬುದರ ಕುರಿತು ಒಂದಿಷ್ಟು ಚರ್ಚಿಸೋಣ. ಭೂಮಿ ತನ್ನ ಸುತ್ತಲೂ ಸುತ್ತುವುದುನ್ನು ಭ್ರಮಣೆ ಎನ್ನುತ್ತೇವೆ. ಭೂಮಿ ಸೆಕೆಂಡಿಗೆ 18.5 ಮೈಲು (29.8 ಕಿ.ಮೀ) ವೇಗದಲ್ಲಿ ತನ್ನ ಸುತ್ತ ಸುತ್ತುತ್ತದೆ. ಅಂತೆಯೇ ಭೂಮಿ ಸೂರ್ಯನ ಗುರುತ್ವದಿಂದ ನಿರ್ದಿಷ್ಟ ಕಕ್ಷೆಯಲ್ಲಿ ಸೂರ್ಯನ ಸುತ್ತ ಸುತ್ತುತ್ತದೆ. ಹೀಗೆ ಸುತ್ತುವಾಗ ಭೂಮಿ ಮತ್ತು ಸೂರ್ಯನ ನಡುವೆ ಒಂದು ರೀತಿಯ ಸಮತೋಲನ ಸ್ಥಿತಿ ಇರುತ್ತದೆ. ಇಂತಹ ಸಮತೋಲನ ಸ್ಥಿತಿಯನ್ನು ಬದಲಾಗಬೇಕಾದರೆ ಭಾರೀ ಪ್ರಮಾಣದ ಶಕ್ತಿ ಬೇಕಾಗುತ್ತದೆ. ಅಂದರೆ ಅನ್ಯ ಆಕಾಶಕಾಯವೊಂದು ಭೂಮಿಗೆ ಢಿಕ್ಕಿ ಹೊಡೆಯಬೇಕು ಅಥವಾ ಭಾರೀ ಕ್ಷುದ್ರಗ್ರಹವೊಂದು ಭೂಮಿಗೆ ಅಪ್ಪಳಿಸಬೇಕು. ಆಗ ಮಾತ್ರ ಇವೆರಡರ ನಡುವಿನ ಸಮತೋಲನ ತಪ್ಪಿ ಭೂಮಿಯ ಕಕ್ಷೆ ಬದಲಾಗುತ್ತದೆ. ಇದರ ಪರಿಣಾಮ ಸಾಮೂಹಿಕ ದುರಂತ ಎಂದು ಹೇಳಲಾಗುತ್ತದೆ.




ಮೇಲಕ್ಕೆ ಎಸೆದ ಚಂಡು ಮರಳಿ ಭೂಮಿಗೆ ಬರುವಂತೆ, ಸೂರ್ಯನ ಗುರುತ್ವಾಕರ್ಷಣೆಗೆ ಒಳಪಟ್ಟ ಭೂಮಿಯ ಕಕ್ಷೆ ತಪ್ಪಿದರೆ ಅದು ಸೂರ್ಯನೆಡೆಗೆ ಚಲಿಸುತ್ತದೆ. ಆಗ ಆಗುವ ಅಪಾಯಗಳನ್ನು ಊಹಿಸುವುದು ಸ್ವಲ್ಪ ಕಷ್ಟ. ಭೂಮಿಯ ಕಕ್ಷೆ ಬದಲಾದರೆ ನಮ್ಮ ಭೂಮಿಯ ಸಮತೋಲನ ತಪ್ಪಿ, ಸೂರ್ಯನಿಗೆ ಅಪ್ಪಳಿಸುತ್ತದೆ. ಆಗ ಬೆಂಕಿಗೆ ಬಿದ್ದ ಪತಂಗದಂತೆ ನಮ್ಮೂ ಭೂಮಿ ಸೂರ್ಯನ ಅಗಾಧ ಶಾಖದಲ್ಲಿ ಸುಟ್ಟು ಭಸ್ಮವಾಗುತ್ತದೆ.

ಈ ಪ್ರಕ್ರಿಯೆ ಒಮ್ಮಲೇ ಸಂಭವಿಸುವುದಿಲ್ಲ. ಭೂಮಿ ಸಮತೋಲನ ತಪ್ಪಿ ಸೂರ್ಯನ ಅಂಗಳಕ್ಕೆ ಬೀಳಲು ಸುಮಾರು 65 ದಿನಗಳನ್ನು ತೆಗೆದುಕೊಳ್ಳುತ್ತದೆ. 41ನೇ ದಿನಕ್ಕೆ ಶುಕ್ರನ ಕಕ್ಷೆ ದಾಟುತ್ತೇವೆ ಮತ್ತು 57ನೇ ದಿನಕ್ಕೆ ಬುಧನ ಕಕ್ಷೆಯನ್ನು ದಾಟುತ್ತೇವೆ. ದಿನಗಳು ಉರುಳಿದಂತೆ ಭೂಮಿ ಸೂರ್ಯನಿಗೆ ಹತ್ತಿರವಾಗುತ್ತದೆ ಮತ್ತು ಹೆಚ್ಚು ಹೆಚ್ಚು ಬಿಸಿಯಾಗತೊಡಗುತ್ತದೆ. ಭೂಮಿಯ ಮೇಲಿನ ಸರಾಸರಿ ತಾಪಮಾನ 500 ಸೆಲ್ಸಿಯಸ್. ಭೂಮಿ ಸೂರ್ಯನೆಡೆಗೆ ಚಲಿಸುತ್ತಿದ್ದಂತೆ ತಾಪಮಾನದಲ್ಲಿ ಏರಿಕೆಯಾಗುತ್ತಲೇ ಇರುತ್ತದೆ. ಅದು ಬುಧನ ಬಳಿ ಬರುತ್ತಿರುವ ವೇಳೆಗೆ 30000 ಸೆಲ್ಸಿಯಸ್‌ಗೂ ಹೆಚ್ಚು ಉಷ್ಣತೆ ಪಡೆದಿರುತ್ತದೆ. ಈ ಹಂತದ ತಾಪಮಾನದಲ್ಲಿ ಭೂಮಿಯ ಮೇಲಿನ ಯಾವುದೇ ಜೀವಿ, ಮಾನವನಿರ್ಮಿತ ಯಾವುದೇ ವಸ್ತು, ಬದುಕಲಾರದು ಅಲ್ಲವೇ? ಅಂತರ್ಜಲ ಸೇರಿದಂತೆ ಭೂಮೇಲ್ಮೈ ಮೇಲಿನ ಎಲ್ಲಾ ನೀರೂ ಸಹ ಆವಿಯಾಗಿ ಹೋಗುತ್ತದೆ. ಗಿಡಮರ ಯಾವುದೂ ಬದುಕಲು ಸಾಧ್ಯವಿಲ್ಲ.

ಸಹಜವಾಗಿ ಸದ್ಯಕ್ಕಂತೂ ಭೂಮಿಯ ಕಕ್ಷೆ ಬದಲಾಗುವುದಿಲ್ಲ. ಆದರೆ ಭವಿಷ್ಯದ ಜಾಡು ಹಿಡಿದು ಹೊರಟರೆ, ಭುಮಿ ಮತ್ತು ಸೂರ್ಯನ ಅಂತರವನ್ನು ದೂರಮಾಡಲು ಸಾಧ್ಯವಿಲ್ಲ. ಏಕೆಂದರೆ ಸೂರ್ಯನಿಗೂ ಸಾವು ಸಮೀಪಿಸುವ ವೇಳೆ ಕೆಂಪು ದೈತ್ಯವಾಗಿ ಹೊಮ್ಮುತ್ತದೆ. ಕ್ರಮೇಣವಾಗಿ ಬುಧ ಮತ್ತು ಶುಕ್ರನ ಕಕ್ಷೆಗಳನ್ನು ದಾಟಿ ಭೂಮಿಯ ಕಕ್ಷೆಗೂ ಆಗಮಿಸುತ್ತದೆ ಎಂಬ ವಾದವಿದೆ. ಆಗ ಏನಾಗುತ್ತೆ ಎಂಬುದಕ್ಕೆ ಉತ್ತರವೂ ಇದೇ ಆಗಿದೆ. ಭೂಮಿ ಮತ್ತು ಸೂರ್ಯ ಪರಸ್ಪರ ಸಮೀಪಿಸಿದಾಗ ಸೌರ ವಿಕಿರಣದ ಪ್ರಮಾಣ ಹೆಚ್ಚುತ್ತದೆ. ಆಗ ಎಲ್ಲವೂ ಭಸ್ಮ. ಭವಿಷ್ಯದ ವಿದ್ಯಮಾನ ನೋಡಲು ನಾವು ಇರುವುದಿಲ್ಲವಾದರೂ ಏನಾಗುತ್ತೆ ಎಂಬುದನ್ನು ತಿಳಿಯಲಾರದೂ ಇದನ್ನು ಗ್ರಹಿಸುವುದು ಅಗತ್ಯ. ಅಲ್ಲವೇ? ಎನ್ನುತ್ತಾ ಶ್ರೀಕರನ ತಾಯಿ ತಮ್ಮ ಪಾಠ ಮುಗಿಸಿದರು.

ಸುಮಾರು 65 ದಶಲಕ್ಷ ವರ್ಷಗಳ ಹಿಂದೆ ಯುಕಾಟಾನ್ ಪರ್ಯಾಯ ದ್ವೀಪ(ಉತ್ತರ ಅಮೇರಿಕಾ)ದ ಬಳಿ ಭೂಮಿಗೆ ಕ್ಷುದ್ರಗ್ರಹವೊಂದು ಅಪ್ಪಳಿಸಿತ್ತು. ಅದು ಹೈಡ್ರೋಜನ್ ಬಾಂಬ್‌ಗಿಂತ 5,00,000 ಪಟ್ಟು ಅಥವಾ 50 ಮೆಹಾವ್ಯಾಟ್‌ನಷ್ಟಿತ್ತು ಎಂದು ಅಂದಾಜಿಸಲಾಗಿದೆ. ಅದರ ಸ್ಫೋಟದಿಂದ 10–15 ಕಿ.ಮೀ ಅಗಲದ ಕುಳಿಯೊಂದು ನಿರ್ಮಾಣವಾಗಿದೆ ಎಂಬುದಕ್ಕೆ ಈಗಲೂ ಪುರಾವೆ ಇದೆ. ಕ್ಷುದ್ರಗ್ರಹ ಅಪ್ಪಳಿಸಿದ್ದರಿಂದಲೇ ಡೈನೋಸಾರ್‌ಗಳು ಸೇರಿದಂತೆ ಅಪಾರ ಜೀವಿಗಳು ನಾಶವಾದವು ಎಂಬುದನ್ನು ಗಮನಿಸಬಹುದು. ಆಗ ಭೂಮಿಯ ಕಕ್ಷೆಯಲ್ಲಿ ಒಂಚೂರು ಬದಲಾವಣೆಯಾದರೂ ಅದು ಸಾಗರದ ಒಂದು ಅಣುವಿನಷ್ಟು ಮಾತ್ರ ಎಂಬುದೂ ಸತ್ಯ. ಆ ಘಟನೆಯಿಂದ ಪುನಃ ಚೇತರಿಸಿಕೊಂಡು ಜೀವನ ನಡೆಸುತ್ತಿದ್ದೇವೆ.

## ಮೈಕ್ರೋ ನ್ಯೂಸ್

### ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ವ್ಯಾಪ್ತಿ ನಿಷೇಧಾಜ್ಞೆ: ಡಿಸಿ ಆದೇಶ

■ ಹಂಪಿ ಟೈಮ್ಸ್ ಬಳ್ಳಾರಿ

ನಗರದ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನಲ್ಲಿ ಮೇ 10 ರಿಂದ 12 ರ ವರೆಗೆ ಬೆಳಿಗ್ಗೆ 10 ರಿಂದ 12 ಮತ್ತು ಮಧ್ಯಾಹ್ನ 02 ರಿಂದ 04 ಗಂಟೆಯವರೆಗೆ ಕರ್ನಾಟಕ ಲೋಕಸೇವಾ ಆಯೋಗ ವತಿಯಿಂದ 2024 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀ. ಆವರಣವನ್ನು ಭಾರತೀಯ ನಾಗರೀಕ ಸುರಕ್ಷಾ ಸಂಹಿತಾ 2023 ರ ಕಲಂ 163 ರಡಿ ಮೇರೆಗೆ ನಿರ್ಬಂಧಿತ ಪ್ರದೇಶವೆಂದು ಘೋಷಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಆವರಣದಲ್ಲಿನ ಜೆರಾಕ್ಸ್ ಸೆಂಟರ್ ಮತ್ತು ಇಂಟರ್‌ನೆಟ್ ಸೆಂಟರ್‌ಗಳನ್ನು ಕಾರ್ಯನಿರ್ವಹಿಸದಂತೆ ಪ್ರತಿಬಂಧಿಸಿ ಆದೇಶಿಸಿದ್ದಾರೆ. ಆ ಪ್ರದೇಶದಲ್ಲಿ ಅನಧಿಕೃತ ವ್ಯಕ್ತಿ ಮತ್ತು ವ್ಯಕ್ತಿಗಳ ಗುಂಪುಗಳಿಗೆ ಪ್ರವೇಶವನ್ನು ನಿಷೇಧಿಸಿದೆ. ಈ ಆದೇಶವು ಪರೀಕ್ಷೆಯ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

### ಮೇ 10 ರಂದು ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಗೆ ಬರುವ 220/11ಕೆವಿ ಅಲ್ಲಿಪುರ ವಿದ್ಯುತ್ ವಿತರಣ ಕೇಂದ್ರದಿಂದ ವಿದ್ಯುತ್ ಸರಬರಾಜು ಆಗುವ ಬ್ಯಾಂಕ್–2ನ ಫೀಡರ್ ಗಳಾದ ಎಫ್–34 ಹಾಗು ಎಫ್–72 ರ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಮೇ 10 ರಂದು ಬೆಳಿಗ್ಗೆ 09 ಗಂಟೆಯಿಂದ ಮಧ್ಯಾಹ್ನ 01 ಗಂಟೆಯವರೆಗೆ ನಗರದ ಫಸ್ಟ್ ಗೇಟ್, ಕೊರಚ ಸ್ಟ್ರೀಟ್, ಉರ್ದು ಟ್ರೈನಿಂಗ್ ಸ್ಕೂಲ್, ಕಡಪಗೆರೆ, ಟೈಲರ್ ಸ್ಟ್ರಿಟ್, ನಂದಿ ಕಾಲೋನಿ, ಸೂರ್ಯ ಕಾಲೋನಿ, ರೆಹಮಬದ್ ಲೇಔಟ್, ಎಚ್.ಆರ್.ಜಿ. ಕಾಲೋನಿ, ತಿಲಕ್ ನಗರ್ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕೆಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

visit our website for daily updates
www.hampitimes.com
epaper.hampitimes.com

## ತುರ್ತು ಸಂದರ್ಭದಲ್ಲಿ ಪ್ರತಿಯೊಬ್ಬರೂ ಸೈನಿಕರಂತೆ ಕಾರ್ಯ ನಿರ್ವಹಿಸೋಣ







ಮೊದಲ ಪುಟದಿಂದ

ಜಿಲ್ಲೆಯ ಪ್ರತಿಯೊಬ್ಬರು ಸೈನಿಕರಂತೆ ಕೆಲಸ ಮಾಡಬೇಕು. ಜಿಲ್ಲಾಡಳಿದೊಂದಿಗೆ ಕೈಜೋಡಿಸಬೇಕು. ಸಾರ್ವಜನಿಕರು ಯಾವುದೇ ರೀತಿಯ ಭಯ ಪಡಬಾರದು ಎಂದರು.

ಜಿಲ್ಲಾಧಿಕಾರಿ ನಿತೀಶ್ ಕೆ. ಮಾತನಾಡಿ, ಕೇಂದ್ರ ಸರ್ಕಾರದ ಆದೇಶದಂತೆ ಹಾಗೂ ರಾಜ್ಯ ಸರ್ಕಾರದ ಸೂಚನೆಯಂತೆ ಜಿಲ್ಲೆಯಲ್ಲಿ ಅಣುಕು ಪ್ರದರ್ಶನ ಹಮ್ಮಿಕೊಳ್ಳಲಾಗಿದ್ದು, ಅಣಕು ಪ್ರದೇಶದ ಮುಖ್ಯ ಉದ್ದೇಶವು ಶತ್ರು ದೇಶಗಳಿಂದ ದಾಳಿಯಾದ ಸಂದರ್ಭದಲ್ಲಿ ಸಾರ್ವಜನಿಕರ ರಕ್ಷಣೆ ಕ್ರಮಕ್ಕೆ ಸಂಬಂಧಿಸಿದ್ದಾಗಿರುತ್ತದೆ ಎಂದು ಹೇಳಿದರು.

ತುರ್ತು ಪರಿಸ್ಥಿತಿ ವೇಳೆ ವಿವಿಧ ಇಲಾಖೆಗಳಿಂದ ಯಾವ ರೀತಿಯಲ್ಲಿ ಕಾರ್ಯನಿರ್ವಹಣೆ ಮಾಡ ಬೇಕು. ಸಾರ್ವಜನಿಕರು ಯಾವ ರೀತಿಯಲ್ಲಿ ಇರಬೇಕು ಎಂಬುದನ್ನು ತಿಳಿಸಲು ಬೇರೆ ಬೇರೆ ಇಲಾಖೆಗಳು ಮತ್ತು ಭದ್ರತಾ ಪಡೆಯ ತಂಡಗಳು ಹೇಗೆ ಕಾರ್ಯನಿರ್ವಹಣೆ ಮಾಡಬೇಕು ಮತ್ತು ಎಂತಹದ್ದೇ ಪರಿಸ್ಥಿತಿ ಎದುರಾದರು ಸಹ ಎಲ್ಲರೂ ಸೇರಿ ಅದನ್ನು ಹೇಗೆ ನಿಭಾಯಿಸಬೇಕು ಎಂಬುದರ ಪೂರ್ವ ತಯಾರಿ ಇದಾಗಿದೆ ಎಂದು ತಿಳಿಸಿದರು.

ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಅಣುಕು ಪ್ರದರ್ಶನ ಮಾಡಬೇಕು. ಸಾರ್ವಜನಿಕರಲ್ಲಿ ಯಾವುದೇ ರೀತಿಯಲ್ಲಿ ಗೊಂದಲ ಹಾಗೂ ಅಂಜಿಕೆ ಇರಬಾರದು. ಜಿಲ್ಲಾಡಳಿತವು ಈಗಾಗಲೇ ಎಲ್ಲಾ ರೀತಿಯ ಸಿದ್ದತೆಯನ್ನು ಮಾಡಿಕೊಂಡಿದೆ. ದೇವಸಗೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 5–6 ಹಳ್ಳಿಗಳಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ತರಬೇತಿ ನೀಡಲಾಗುವುದು. ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ಇಲಾಖೆಯಿಂದ ಕಂಟ್ರೋಲ್ ರೋಂ ಪ್ರಾರಂಭ ಮಾಡಲಾಗಿದ್ದು, ಸಾರ್ವಜನಿಕರು ಸದುಪಯೋಗ ಪಡೆಯಬೇಕು ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಎನ್.ಸಿ.ಸಿ, ವಿದ್ಯಾರ್ಥಿಗಳು ಇದ್ದರು. ಯಾವುದೇ ಮಹತ್ವದ ವಿಷಯಗಳ ಬಗ್ಗೆ ಜನಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಜಿಲ್ಲೆಯ ಮಾಧ್ಯಮ ಪ್ರತಿನಿಧಿಗಳಿಗೆ ಸಹ ಅಣುಕು ಪ್ರದರ್ಶನ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು.

ಹೊಸಪೇಟೆ ನಗರದ ಅಗ್ನಿಶಾಮಕ ದಳದ ಸಿಬ್ಬಂದಿ ನಗರದಲ್ಲಿ ಮಾಕ್ ಡ್ರಿಲ್ ಮೂಲಕ ತುರ್ತುಪರಿಸ್ಥಿತಿಯಲ್ಲಿ ಎಚ್ಚರಿಕೆವಹಿಸಬೇಕಾದ ಮತ್ತು ಕೈಗೊಳ್ಳಬೇಕಾದ ಪ್ರಮುಖ ಅಂಶಗಳ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು. ಜನರು ವೀಕ್ಷಿಸಿದರು.


## ಭಾರತೀಯ ಸೈನಿಕರ ಶಕ್ತಿ ಬಲವರ್ಧನೆಗೆ, ಯಶಸ್ಸಿಗೆ ಮಸೀದಿಗಳಲ್ಲಿ ಪ್ರಾರ್ಥನೆ



**ಬೆಂಗಳೂರು:** ಪೆಹಲ್ಗಮ್ ದಾಳಿಗೆ ಪ್ರತಿಕಾರವಾಗಿ ಆಪರೇಷನ್ ಸಿಂಧೂರ ಕಾರ್ಯಾಚರಣೆ ನಡೆಸಿ ದೇಶ ರಕ್ಷಣೆಯಲ್ಲಿ ತೊಡಗಿರುವ ಭಾರತೀಯ ಸೈನಿಕರ ಬಲವರ್ಧನೆಗೆ ಮತ್ತು ಯಶಸ್ಸಿಗೆ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಶೇಷಾದ್ರಿಪುರಂ ಮಸೀದಿಯಲ್ಲಿ ಶುಕ್ರವಾರ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ದೇಶದ ರಕ್ಷಣೆಗಾಗಿ ನಡೆಯುವ ಸೈನ್ಯದ ಹೋರಾಟದಲ್ಲಿ ನನಗೂ ಅವಕಾಶ ಬಂದರೆ ನಾನೂ ಹೋಗುವೆ, ಭಾರತ ನಮ್ಮ ದೇಶ ಎಂದು ಹೇಳಿದರು. ಸಚಿವರ ಸೂಚನೆ ಯಂತೆ ಹೊಸಪೇಟೆಯ ಮಸೀದಿ ಸೇರಿದಂತೆ ರಾಜ್ಯದ ವಖ್ಫ್ ಬೋರ್ಡ್ ವ್ಯಾಪ್ತಿಯ ಮಸೀದಿಗಳಲ್ಲಿ ದೇಶದ ಹೆಮ್ಮಯ ಸೈನಿಕರಿಗೆ ಶ್ರೇಯಸ್ಸು ಕೋರಿ ಪ್ರಾರ್ಥನೆ ಸಲ್ಲಿಸಲಾಯಿತು.

ನಿಮ್ಮ ಸಂದೇಶ ಜಗತ್ತಿನೆಡೆಗೆ, ಜಾಹೀರಾತು ನಿಮ್ಮದು, ಪ್ರಸಾರ ನಮ್ಮದು!
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ
ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper
ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1.25 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com
ಮುದ್ರಿತ ಜಾಹೀರಾತಿಗೆ ಮಾತ್ರ ಶುಲ್ಕ ಡಿಜಿಟಲ್ ಆವೃತ್ತಿ ಉಚಿತ*!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ
ಹಂಪಿ ಟೈಮ್ಸ್ ಇ-ಪೇಪರ್
*conditions apply
ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್



## ತುಂಗಭದ್ರಾ ನೀರಿನ ಮಟ್ಟ

**ಶುಕ್ರವಾರ : 09–05–2025**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.55 ಅಡಿ |
| ಒಳ ಹರಿವು | 2386 ಕ್ಯುಸೆಕ್ |
| ಹೊರ ಹರಿವು | 326 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.693 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1577.69 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 138 ಕ್ಯುಸೆಕ್ |
| ಸಾಮರ್ಥ್ಯ | 3.450 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

**10–05–2025 – ಶನಿವಾರ**

| | |
|---|---|
| ತಿಥಿ | : ತ್ರಯೋದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಚಿತ್ತ |
| ಯೋಗ | : ಸಿದ್ಧಿ |
| ಕರಣ | : ತೈತುಲ |
| ಸೂರ್ಯೋದಯ | : 05:49:29 |
| ಸೂರ್ಯಾಸ್ತ | : 18:57:28 |
| ರಾಹು ಕಾಲ | : 09:06–10:45 |
| ಯಮಘಂಡ ಕಾಲ | : 14:02–15:40 |
| ಗುಳಿಕ ಕಾಲ | : 05:49–07:28 |

# ಕೈಮಗ್ಗ ತಂತ್ರಜ್ಞಾನದಲ್ಲಿ ಡಿಪ್ಲೋಮಾ ಕೋರ್ಸ್ ಪ್ರವೇಶ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

2025–26ನೇ ಸಾಲಿಗೆ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೋಮಾ ಕೋರ್ಸ್ ಕಲಿಕೆಗಾಗಿ 39 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಇಂಗ್ಲಿಷ್‌ನ್ನು ಒಂದು ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿಯ ಪ್ರಕಾರ ಪ್ರತಿ ವಿದ್ಯಾರ್ಥಿಗೆ, ಪ್ರತಿ ತಿಂಗಳು ರೂ.2,500 ರಂತೆ ಶಿಷ್ಯವೇತನ ನೀಡಲಾಗುವುದು ಹಾಗೂ ಪುರುಷ ಅಭ್ಯರ್ಥಿಗಳಿಗೆ ವಸತಿ ನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು.

ಸಾಮಾನ್ಯ ವರ್ಗದ ಅಭ್ಯರ್ಥಿಗಳು ಜುಲೈ 01ಕ್ಕೆ ಅನ್ವಯಿಸುವಂತೆ 15 ರಿಂದ 23 ವರ್ಷ ವಯೋಮಿತಿಯಲ್ಲಿರಬೇಕು. ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ವರ್ಗದ ಅಭ್ಯರ್ಥಿಗಳು 15 ರಿಂದ 25ರ ವಯೋಮಿತಿಯಲ್ಲಿರಬೇಕು. ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಕ್ರೂಢೀಕೃತ ಅಂಕಗಳು ಮೆರಿಟ್ ಲೆಕ್ಕಾಚಾರಕ್ಕೆ ಆಧಾರವಾ ಗಿರುತ್ತದೆ.

ಅರ್ಜಿಗಳನ್ನು https://khtigadag.ac.in/Admissionform.pdf ಲಿಂಕ್‌ನಲ್ಲಿ ಡೌನ್‌ಲೊಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಜೂ.15 ರೊಳಗಾಗಿ ಇದೇ ಕಚೇರಿಗೆ ಸಲ್ಲಿಸಬೇಕು.

ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಆಯಾ ಡಿಪ್ಲೋಮಾ ಸಂಸ್ಥೆಗಳಲ್ಲಿ ಕೋರ್ಸ್ ಪ್ರವೇಶ ಕುರಿತಂತೆ ಕೌನ್ಸಲಿಂಗ್‌ಗಾಗಿ ಕರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಮತ್ತು ಅರ್ಜಿ ಫಾರಂಗಳಿಗಾಗಿ ನಗರದ ಅನಂತಪುರ ರಸ್ತೆಯ ಹೊಸ ಜಿಲ್ಲಾಡಳಿತ ಭವನದ 'ಎ' ಬ್ಲಾಕ್‌ನ 1ನೇ ಮಹಡಿಯ ಕೊಠಡಿ ಸಂಖ್ಯೆ 29ರ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರವರ ಕಚೇರಿ ಅಥವಾ ಮೊ.9902772936, 9844837264 ಮತ್ತು 9901313417 ಗೆ ಸಂಪರ್ಕಿಸಬಹುದು.

# ಸಚಿವ ಸಂಪುಟದ ನಿರ್ಣಯಗಳು



### ಸಾಮಾಜಿಕ ಸಮಿಕ್ಷಾ ವರದಿ ನಿರ್ಣಯ ಮುಂದೂಡಿಕೆ

ದಿನಾಂಕ: 29.02.2024 ರಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ವರದಿಯನ್ನು 54 ಮಾನದಂಡಗಳಿಗೆ ಅನುಗುಣವಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2015ರ ದತ್ತಾಂಶಗಳ ಅಧ್ಯಯನ 2024 ಮತ್ತು ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ 2015ರ ಅಂಕಿ–ಅಂಶಗಳನ್ನು ಒಳಗೊಂಡ ವರದಿಗಳನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲಾಗಿತ್ತು. ಮುಚ್ಚಿದ ಲಕೋಟೆಯನ್ನು ಸಚಿವ ಸಂಪುಟದಲ್ಲಿ ತೆರೆಯಲಾಗಿತ್ತು. ದತ್ತಾಂಶ ಹಾಗೂ ಅಧ್ಯಯನ ವರದಿ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ಸಚಿವ ಸಂಪುಟದ ಮುಂದೆ ಮಂಡಿಸಲಾಗಿತ್ತು ಈ ವಿಷಯವನ್ನು ಮುಂದಿನ ಸಂಪುಟ ಸಭೆಗೆ ಮುಂದೂಡಲಾಯಿತು.

### ಅಂಗವಿಕಲರಿಗೆ ಶೇ.4 ರಷ್ಟು ಮೀಸಲಾತಿ

ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ 2016 ರಲ್ಲಿ ಪರಿಭಾಷಿಸಲಾಗಿರುವ ಎದ್ದುಕಾಣುವ ಅಂಗವೈಕಲ್ಯವುಳ್ಳ ಅಧಿಕಾರಿಗಳಿಗೆ ಗುಂಪು–ಬಿ ಮತ್ತು ಗುಂಪು–ಎ (ಕಿರಿಯ ಶ್ರೇಣಿ) ಹುದ್ದೆಗಳಲ್ಲಿ ಮುಂಬಡ್ತಿಯಲ್ಲಿ ಶೇ.4 ರಷ್ಟು ಮೀಸಲಾತಿ ಕಲ್ಪಿಸಲು; ಸಚಿವ ಸಂಪುಟ ನಿರ್ಣಯಿಸಿದೆ ಎಂದು ಸಚಿವರು ವಿವರಿಸಿದರು.

ಅಂಗವಿಕಲ ವ್ಯಕ್ತಿಗಳ ಹಕ್ಕು ಅಧಿನಿಯಮ 2016ರ ಅನ್ವಯ "Provided that the Reservation in Promotion shall be in accordance with such instructions as are issued by the appropriate Government from time to time" ಎಂಬ ಅವಕಾಶ ಕಲ್ಪಿಸಲಾಗಿದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯವು ಈ ಅವಕಾಶವನ್ನು ಪುಷ್ಟೀಕರಿಸಿ ಆದೇಶ ಹೊರಡಿಸಿದೆ.

### ಸಾರ್ವತ್ರಿಕ ವರ್ಗಾವಣೆ ಮಾರ್ಗಸೂಚಿ ಪ್ರಕಟ

2025–26ನೇ ಸಾಲಿನ ಸಾರ್ವತ್ರಿಕ ವರ್ಗಾವಣೆ ಮಾರ್ಗಸೂಚಿಗಳನ್ನು ಹೊರಡಿಸಲು ಮತ್ತು ಸದರಿ ಮಾರ್ಗಸೂಚಿಯನ್ನು ಪರಿಷ್ಕರಿಸಲು ಹಾಗೂ ವರ್ಗಾವಣಾ ಅವಧಿಯನ್ನು ವಿಸ್ತರಿಸಲು ಮಾನ್ಯ ಮುಖ್ಯಮಂತ್ರಿಗಳಿಗೆ ಅಧಿಕಾರ ನೀಡಲು; ಸಚಿವ ಸಂಪುಟ ನಿರ್ಣಯಿಸಿದೆ ಎಂದು ಕಾನೂನು ಸಚಿವರು ವಿವರಿಸಿದರು.

ಆಯಾ ವೃಂದಗಳ ಕಾರ್ಯನಿರತ ವೃಂದ ಬಲದ ಶೇ.6ನ್ನು ಮೀರದಂತೆ ದಿ:15.05.2025 ರಿಂದ 14.06.2025 ರವರೆಗೆ ಸಾರ್ವತ್ರಿಕ ವರ್ಗಾವಣೆ ಕೈಗೊಳ್ಳಲು ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖಾ ಸಚಿವರಿಗೆ ಹಾಗೂ ಗ್ರೂಪ್ 'ಸಿ' ಮತ್ತು 'ಡಿ' ವೃಂಧದ ನೇಮಕಾತಿ ಪ್ರಾಧಿಕಾರಗಳಿಗೆ ಅಧಿಕಾರ ಪ್ರತ್ಯಾಯೋಜಿಸಲು ಪ್ರಸ್ತಾಪಿಸಲಾಗಿದೆ.

### ಸರ್ಕಾರಿ ಸೇವೆಯಿಂದ ಡಾ. ಬಾಲಕೃಷ್ಣ ವಜಾ

ಡಾ॥ ಜಿ.ಎಸ್.ಬಾಲಕೃಷ್ಣ, ಪ್ರಸೂತಿ ತಜ್ಞರು, ಸಾರ್ವಜನಿಕ ಆಸ್ಪತ್ರೆ ಕೊಪ್ಪ, ಚಿಕ್ಕಮಗಳೂರು ಜಿಲ್ಲೆ ಇವರು ಕುಮಾರಿ. ಕಲ್ಪನ ಎಂಬ ಗರ್ಭಿಣಿಗೆ ದಿ:14.03.2020 ರಂದು ಹೆರಿಗೆ ಮಾಡಿಸಿ, ಅವರಿಗೆ ಜನಿಸಿದ ಹೆಣ್ಣು ಮಗುವನ್ನು ರೂ.50,000/– ಗಳಿಗೆ ಶ್ರೀಮತಿ ಪ್ರೇಮಲತಾ ಎಂಬುವವರಿಗೆ ಮಾರಾಟ ಮಾಡಿ, ಶ್ರೀಮತಿ. ಪ್ರಮಲತಾ ಎಂಬುವವರಿಗೆ ಹೆರಿಗೆಯಾದಂತೆ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿರುವ ಆರೋಪಕ್ಕಾಗಿ ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆಯಲ್ಲಿ ದುರ್ನಡತೆಯ ಆರೋಪವು ಸಾಬೀತಾಗಿರುವುದರಿಂದ, ಇವರನ್ನು ಕೆಸಿಎಸ್ (ಸಿಸಿಎ) ನಿಯಮಗಳು 1957ರ ನಿಯಮ 8(ತು) ರಡಿಯಲ್ಲಿ ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಲು; ಸಚಿವ ಸಂಪುಟ ನಿರ್ಧರಿಸಿದೆ ಎಂದು ಮಾನ್ಯ ಕಾನೂನು ಮತ್ತು ಪ್ರವಾಸೋದ್ಯಮ ಸಚಿವರು ವಿವರಿಸಿದರು.

ಪ್ರಸ್ತಾಪಿತ ಪ್ರಕರಣದಲ್ಲಿ ಕುಮಾರಿ ಕಲ್ಪನ ಎಂಬ ಗರ್ಭಿಣಿಗೆ ದಿ:14.03.2020 ರಂದು ಹೆರಿಗೆ ಮಾಡಿಸಿ, ಅವರಿಗೆ ಜನಿಸಿದ ಹೆಣ್ಣು ಮಗುವನ್ನು ಶ್ರೀಮತಿ ಪೇಮಲತಾ ಎಂಬುವವರಿಗೆ ಮಾರಾಟ ಮಾಡಿ ಶ್ರೀಮತಿ ಪ್ರೇಮಲತಾ ಎಂಬುವವರಿಗೆ ಹೆರಿಗೆಯಾದಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿರುವ ಆರೋಪ ಸಾಬೀತಾಗಿರುವ ಹಿನ್ನೆಲೆಯಲ್ಲಿದುರ್ನಡತೆಸಾಬೀತಾಗಿರುವುದರಿಂದ ಸರ್ಕಾರಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸಲು ತೀರ್ಮಾನಿಸಿದೆ.

### ಇ.ಎಸ್.ಐ ವೃಂದ ನೇಮಕಾತಿಗಳ ಅನುಮೋದನೆ

ಕರಡು ಕರ್ನಾಟಕ ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) ಸೇವೆಗಳ (ನೇಮಕಾತಿ) ನಿಯಮಗಳು 2025ನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿ ಭಾದಿತರಾಗಬಹುದಾದಂತಹ ವ್ಯಕ್ತಿಗಳಿಂದ ಸಲಹೆ/ ಆಕ್ಷೇಪಣೆಗಳನ್ನು ಆಹ್ವಾನಿಸಲು; ಮತ್ತು ಸಲಹೆ/ಆಕ್ಷೇಪಣೆಗಳು ಸ್ವೀಕೃತವಾಗದಿದ್ದಲ್ಲಿ ಅಥವಾ ಸ್ವೀಕೃತವಾದ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಿ ಕರಡು ನಿಯಮಗಳಲ್ಲಿ ಯಾವುದೇ ಪ್ರಮುಖ ಬದಲಾವಣೆಗಳು ಇಲ್ಲದಿದ್ದಲ್ಲಿ ಮತ್ತೊಮ್ಮೆ ಸಚಿವ ಸಂಪುಟದ ಮುಂದೆ ಮಂಡಿಸದೆ ಸದರಿ ನಿಯಮಗಳನ್ನು ಇಲಾಖಾ ಹಂತದಲ್ಲಿಯೇ ಅಂತಿಮಗೊಳಿಸಲು ಸಚಿವ ಸಂಪುಟ ನಿರ್ಧರಿಸಿದೆ ಎಂದು ವಿವರಿಸಿದರು.

ಹಿಂದಿನ ವೃಂದ ಮತ್ತು ನೇಮಕಾತಿ ನಿಯಮಗಳನ್ನು 2007 ರಲ್ಲಿ ಪರಿಷ್ಕರಣೆ ಮಾಡಲಾಗಿದೆ. 10 ವರ್ಷಗಳಿಗೊಮ್ಮೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಮಗ್ರವಾಗಿ ಪರಿಷ್ಕರಿಸುವುದು ಕಡ್ಡಾಯವಾಗಿದೆ. 17 ವರ್ಷಗಳಾಗಿದ್ದರೂ ಇಎಸ್‌ಐಎಸ್ ನ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸಂಪೂರ್ಣವಾಗಿ ಮರುಪರಿಶೀಲಿಸಲಾಗಿಲ್ಲ. ಹೊಸದಾಗಿ ಸೃಜಿಸಲಾದ ಹುದ್ದೆಗಳ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಲು ಪ್ರಸ್ತಾಪಿಸಲಾಗಿದೆ.

### ಮೆಡಿಕಲ್ ಕಾಲೇಜ್ ಪೀಠೋಪಕರಣ ಖರೀದಿ

ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಿಸಿರುವ 450 ಹಾಸಿಗೆಗಳ ಹೊಸ ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಯಂತ್ರೋಪಕರಣಗಳು ಹಾಗೂ ಪೀಠೋಪಕರಣಗಳನ್ನು ರೂ.26.98 ಕೋಟಿಗಳ ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲು; ಸಚಿವ ಸಂಪುಟ ನಿರ್ಣಯಿಸಿದೆ ಎಂದು ಸಚಿವರು ವಿವರಿಸಿದರು.

ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 450 ಹಾಸಿಗೆಗಳ ಹೊಸ ಆಸ್ಪತ್ರೆಯ ಕಟ್ಟಡ ಕಾಮಗಾರಿಯು ಮುಕ್ತಾಯ ಹಂತದಲ್ಲಿದ್ದು, ಸದರಿ ಆಸ್ಪತ್ರೆಯನ್ನು ಸಾರ್ವಜನಿಕ ಸೇವೆಗೆ ಅರ್ಪಿಸುವ ಮೂಲಕ ಜಿಲ್ಲೆಯ ಬಡ ರೋಗಿಗಳ ಮತ್ತು ವಿದ್ಯಾರ್ಥಿಗಳ ಕಲಿಕೆ ಸಾಮರ್ಥ್ಯವನ್ನು ಹೆಚ್ಚಿಸಲು ಆಸ್ಪತ್ರೆಯ ವಿಭಾಗವಾರು ಮತ್ತು ಪೀಠೋಪಕರಣಗಳ ಪರಿಷ್ಕೃತ ಸಂಕ್ಷಿಪ್ತ ಬೇಡಿಕೆಯನ್ನು ಪ್ರಸ್ತಾಪಿಸಲಾಗಿದೆ.

### ಸರ್ಕಾರಿ ಸೇವೆಯಿಂದ ವಜಾ

ಶ್ರೀ ಬಿ.ಪದ್ಮನಾಭ, ಹಿಂದಿನ ಅಧೀಕ್ಷಕ ಇಂಜಿನಿಯರ್, ಹೇಮಾವತಿ ಕಾಲುವೆ ವೃತ್ತ, ಚನ್ನರಾಯಪಟ್ಟಣ, ಹಾಸನ ಜಿಲ್ಲೆ (ಪ್ರಸ್ತುತ ಅಧೀಕ್ಷಕ ಇಂಜಿನಿಯರ್, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ, ಬೆಂಗಳೂರು) ಹಾಗೂ ಶ್ರೀ ಪ್ರಕಾಶ್ ಎಫ್.ಹೊಸಮನಿ, ಹಿಂದಿನ ಕಿರಿಯ ಇಂಜಿನಿಯರ್ ಎಂ.ಆರ್.ಬಿ.ಸಿ, ಶಿರಸಂಗಿ ತಾಲ್ಲೂಕು, ಸವದತ್ತಿ (ಪ್ರಸ್ತುತ ಕಿರಿಯ ಇಂಜಿನಿಯರ್ ಶಿಗ್ಗಾಂವಿ ಏತ ನೀರಾವರಿ ವಿಭಾಗ, ಧಾರವಾಡ) ರವರುಗಳನ್ನು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು–1957ರ ನಿಯಮ–2(ತು) ರನ್ವಯ ಸರ್ಕಾರಿ ಸೇವೆಯಿಂದ ವಜಾಗೊಳಿಸಲು; ಸಚಿವ ಸಂಪುಟ ನಿರ್ಣಯಿಸಿದೆ ಎಂದು ವಿವರಿಸಿದರು.

ಕ್ರಿಮಿನಲ್ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟು ದಂಡನೆಗೆ ಗುರಿಯಾದ ಸರ್ಕಾರಿ ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಸರ್ಕಾರಿ ಆದೇಶದಂತೆ ಶ್ರೀ ಬಿ.ಪದ್ಮನಾಭ ಮತ್ತು ಶ್ರೀ ಪ್ರಕಾಶ್ ಎಫ್ ಹೊಸಮನಿ ಅವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಲು ಪ್ರಸ್ತಾಪಿಸಲಾಗಿತ್ತು.

### ಸರ್ಕಾರಿ ಸೇವೆಯಿಂದ ವಜಾ ರದ್ದು

ಮಾನ್ಯ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠವು ಕ್ರಿಮಿನಲ್ ಅಪೀಲ್ ಸಂಖ್ಯೆ:200108/2025ರಲ್ಲಿ ದಿನಾಂಕ: 0512.2022ರಂದು ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ದಿ॥ಲಕ್ಷ್ಮಣ. ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಿ ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ:ಜಸಂಇ 147 ಸೇಇವಿ 2007 ದಿನಾಂಕ: 08.05.2017ರ ಆದೇಶವನ್ನು ಹಿಂಪಡೆಯಲು; ಹಾಗೂ ಶ್ರೀ ಲಕ್ಷ್ಮಣ, ಇವರು ಸೇವೆಯನ್ನು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಮರುಸ್ಥಾಪಿಸಲು ಹಾಗೂ ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಿರುವ ದಿ:08.05.2017ರಿಂದ ದಿ:31.05.2021(ನಿವೃತ್ತ ದಿನಾಂಕ)ರ ವರೆಗಿನ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿಯೆಂದು (ಊಢ–ಟಿಂಟ) ಪರಿಗಣಿಸಲು ಮತ್ತು ಇವರು ಸೇವೆಯಿಂದ ವಜಾಗೊಂಡ ದಿನಾಂಕಕ್ಕೆ ಲಭ್ಯವಾಗುವ ವೇತನದ ಆಧಾರದ ಮೇರೆಗೆ ಇವರಿಗೆ ನಿವೃತ್ತಿ ಸೌಲಭ್ಯಗಳನ್ನು ನಿಯಮಾನುಸಾರ ಪಾವತಿಸಲು; ಸಚಿವ ಸಂಪುಟ ನಿರ್ಧರಿಸಿದೆ ಎಂದು ಮಾನ್ಯ ಕಾನೂನು ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು.

ರಾಜ್ಯ ಉಚ್ಚ ನ್ಯಾಯಾಲಯವು ಸದರಿಯವರ ಪ್ರಕರಣವನ್ನು ರದ್ದುಗೊಳಿಸಿರುವುದರಿಂದ ಶ್ರೀ ಲಕ್ಷ್ಮಣ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರನ್ನು ಸೇವೆಯಲ್ಲಿ ಪುನರ್ ಸ್ಥಾಪಿಸಲು ಹಾಗೂ ಲಭ್ಯವಾಗುವ ಸೌಲಭ್ಯಗಳನ್ನು ನಿಯಮಾನುಸಾರ ಬಿಡುಗಡೆಗೊಳಿಸಲು ನಿರ್ಣಯಿಸಿರುತ್ತದೆ. ದಿ:08.02.2023 ರಂದು ಆಪಾದಿತ ನೌಕರ ಶ್ರೀ ಲಕ್ಷ್ಮಣ ರವರು ನಿಧನ ಹೊಂದಿರುತ್ತಾರೆ.

### ಸನ್ನಡತೆ ಆಧಾರದ ಮೇಲೆ ಸಜಾ ಬಂಧಿಗಳ ಬಿಡುಗಡೆ

ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ ಅನುಬಂಧ–1 ರಲ್ಲಿ ನಮೂದಿಸಿರುವ 45 ಜೀವಾವಧಿ ಶಿಕ್ಷಾ ಬಂದಿಗಳನ್ನು ಸನ್ನಡತೆಯ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆಗೊಳಿಸಲು ಹಾಗೂ ಅನುಬಂಧ–2 ರಲ್ಲಿ ನಮೂದಿಸಿರುವ ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ 03 ಶಿಕ್ಷಾ ಬಂದಿಗಳನ್ನು ಕೇಂದ್ರ ಗೃಹ ಮಂತ್ರಾಲಯದ ಸಹಮತಿ ದೊರಕಿದ ನಂತರ ಭಾರತ ಸಂವಿಧಾನದ ಅನುಚ್ಛೇದ–161ರ ಪ್ರಕಾರ ಸನ್ನಡತೆಯ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆಗೊಳಿಸಲು; ಸಚಿವ ಸಂಪುಟ ನಿರ್ಣಯಿಸಿದೆ ಎಂದು ಮಾನ್ಯ ಕಾನೂನು ಮತ್ತು ಪ್ರವಾಸೋದ್ಯಮ ಸಚಿವರು ತಿಳಿಸಿದರು.

### ಪಿಎಂ ಆವಾಸ್ ಯೋಜನೆ ಅನುಷ್ಠಾನಕ್ಕೆ ನಿರ್ಧಾರ

ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ಅನ್ನು ಕೇಂದ್ರ ಸರ್ಕಾರವು ದಿನಾಂಕ: 01.09.2024 ರಿಂದ ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನ ಗೊಳಿಸಬೇಕೆ ಅಥವಾ ಬೇಡವೆ ಎಂಬ ಬಗ್ಗೆ ತೀರ್ಮಾನಿಸಲು; ಮತ್ತು ಕಒಂಜ(ಗ)–2.0 ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು ಸರ್ಕಾರವು ಒಪ್ಪಿದ್ದಲ್ಲಿ, ಈ ಕೆಳಕಂಡ ಉಪ–ಅಂಶಗಳಿಗೆ ಸಚಿವ ಸಂಪುಟದ ಅನುಮೋದನೆ ನೀಡಲು ಮಾನ್ಯ ಕಾನೂನು ಮತ್ತು ಪ್ರವಾಸೋದ್ಯಮ ಸಚಿವರು ವಿವರಿಸಿದರು.

### ಸೂಪರ್ ಸ್ಪೆಷಾಲಿಟಿ ವೈದ್ಯರುಗಳ ವಯೋನಿವೃತ್ತಿ ಹೆಚ್ಚಳ

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಸೂಪರ್ ಸ್ಪೆಷಾಲಿಟಿ ವೈದ್ಯರುಗಳ ವಯೋನಿವೃತ್ತಿ ವಯಸ್ಸನ್ನು 60 ರಿಂದ 65 ವರ್ಷಕ್ಕೆ ಹೆಚ್ಚಿಸಲು; ಸಚಿವ ಸಂಪುಟ ನಿರ್ಧರಿಸಿದೆ ಎಂದು ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ತಿಳಿಸಿದರು.

# ರೈತರು ಹತ್ತಿ ಬೆಳೆ ಬಿತ್ತನೆಗೆ ಬೇಸಿಗೆ ಸಕಾಲವಲ್ಲ

## ಕೃಷಿ ಇಲಾಖೆ ಜಂಟಿ ನಿರ್ದೇಶಕ ಶರಣಪ್ಪ ಮುದಗಲ್ ಸಲಹೆ

■ ಹಂಪಿ ಟೈಮ್ಸ್ ಹೊಸಪೇಟೆ

ಹತ್ತಿ ಬೆಳೆ ಬಿತ್ತನೆಗೆ ಉದ್ದೇಶಿಸಿರುವ ಜಿಲ್ಲಾ ವ್ಯಾಪ್ತಿಯ ರೈತರಿಗೆ ಕೃಷಿ ವಿಜ್ಞಾನಿಗಳ ಶಿಫಾರಸ್ಸಿನಂತೆ ಬೇಸಿಗೆ ಸಕಾಲವಲ್ಲ, ಜೂನ್ ಮೊದಲ ವಾರದಿಂದ ಜುಲೈ ಮೂರನೇ ವಾರದವರೆಗೆ ಬಿತ್ತನೆಯ ಕಾಲಾವಧಿಯನ್ನು ಅನುಸರಿಸುವಂತೆ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಶರಣಪ್ಪ ಮುದಗಲ್ ತಿಳಿಸಿದ್ದಾರೆ.

ಹತ್ತಿ ಬೆಳೆಯುವ ರೈತರು ಮಾರುಕಟ್ಟೆಯಲ್ಲಿರುವ ವಿವಿಧ ಹತ್ತಿ ತಳಿಗಳ ಲಭ್ಯತೆಯ ಮೇಲೆ ಕೆಲವು ಮುಂಜಾಗೃತಾ ಕ್ರಮಗಳನ್ನು ಪಾಲಿಸುವಂತೆ ಜಾಗೃತಿ ಮೂಡಿಸಲಾಗಿದೆ. ಬಿತ್ತನೆ ಬೀಜ ಖರೀದಿಸುವ ಮುನ್ನ ಪ್ಯಾಕೇಟ್‌ನ್ನು ಪರಿಶೀಲಿಸಿ, ತಯಾರಕರ ಕಂಪನಿಯ ಪೂರ್ಣ ಹೆಸರು ಹಾಗೂ ವಿಳಾಸ ಸರಿ ಇರುವುದನ್ನು ಹಾಗೂ ಅದರೊಂದಿಗೆ ನಿಜ ಚೀಟಿ ಪತ್ರ ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಬಿತ್ತನೆ ಬೀಜವನ್ನು ಅಧಿಕೃತ ಪರವಾನಿಗೆ ಹೊಂದಿದ ಮಾರಾಟಗಾರರಿಂದ ಖರೀದಿಸಬೇಕು. ಕಡ್ಡಾಯವಾಗಿ ಖರೀದಿ ರಸೀದಿ ಪಡೆಯಬೇಕು. ಆಯಾ ತಳಿಯ ಬೇಸಾಯ ಪದ್ಧತಿಯ ಬಗ್ಗೆ ಕರಪತ್ರ ಪಡೆಯಬೇಕು. ಬಿತ್ತನೆ ಬಳಿಕ ಕಟಾವು ಆಗುವವರೆಗೂ ಬೀಜದ ಚೀಲ, ಅಲ್ಪ ಪ್ರಮಾಣದ ಬೀಜ, ರಸೀದಿ ಮತ್ತು ಕರಪತ್ರವನ್ನು ಕಾಯ್ದಿರಿಸಿಕೊಳ್ಳಬೇಕು. ಪ್ರತಿ ಬಿ.ಟಿ ಹತ್ತಿಯ ಪ್ಯಾಕೇಟ್ ಜತೆಗೆ 125 ಗ್ರಾಂ ಬಿ.ಟಿಯೇತರ(ರೆಫ್ಯೂಜಿ) ಬೀಜಗಳನ್ನು ನೀಡುತ್ತಿದ್ದು, ರೈತರು ತಮ್ಮ ಹೊಲದ ಸುತ್ತಲು ನಾಲ್ಕು ಸಾಲಿನಲ್ಲಿ ಈ ಬೀಜಗಳನ್ನು ಕಡ್ಡಾಯವಾಗಿ ಬಿತ್ತನೆ ಮಾಡಬೇಕು. ಇದರಿಂದ ಕಾಯಿಕೊರಕ ಹುಳುವಿನಲ್ಲಿ ಬಿ.ಟಿ ನಿರೋಧಕ ಶಕ್ತಿಯನ್ನು ತಡೆಗಟ್ಟಲು ಸಹಕಾರಿಯಾಗುತ್ತದೆ ಹಾಗೂ ಕಾಯಿಕೊರಕದ ಬಾಧೆಯನ್ನು ಗುರುತಿಸಲು ಅನುಕೂಲವಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ರೈತರು ಆಯಾ ವ್ಯಾಪ್ತಿ ರೈತ ಸಂಪರ್ಕ ಕೇಂದ್ರ ಅಥವಾ ಕೃಷಿ ಸಹಾಯಕ ನಿರ್ದೇಶಕರ ಕಚೇರಿಗೆ ಭೇಟಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಡಿಪ್ಲೋಮಾ ಪ್ರವೇಶಕ್ಕೆ ಅರ್ಜಿ ಸಲ್ಲಿಸಿ

■ ಹಂಪಿ ಟೈಮ್ಸ್ ಹೊಸಪೇಟೆ


2025–26 ನೇ ಸಾಲಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಡಿಪ್ಲೋಮಾ ಕೋರ್ಸ್ಗಳಿಗೆ ಪ್ರವೇಶಾತಿಗಳು ಆರಂಭವಾಗಿವೆ ಎಂದು ಹೂವಿನಹಡಗಲಿ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ, ಪಿಯುಸಿ ಸೈನ್ಸ್, ಐಟಿಐ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನೀಯರಿಂಗ್, ಸೈಬರ್ ಫಿಜಿಕಲ್ ಸಿಸ್ಟಮ್ ಮತ್ತು ಸೆಕ್ಯೂರಿಟಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನೀಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನೀಯರಿಂಗ್ ವಿಭಾಗಗಳು ಲಭ್ಯವಿದೆ. ಕಾಲೇಜಿನಲ್ಲಿ ನುರಿತ ಬೋಧಕ ಸಿಬ್ಬಂದಿಗಳು ಉತ್ತಮ ಗುಣಮಟ್ಟದ ಪ್ರಯೋಗಾಲಯ, ಗ್ರಂಥಾಲಯ ಸೇರಿದಂತೆ ಕ್ಯಾಂಪಸ್ ಇಂಟರ್‌ವ್ಯೂ ಸೌಲಭ್ಯ ಹೊಂದಿದೆ. ಆಸಕ್ತ ವಿದ್ಯಾರ್ಥಿಗಳು ಕಾಲೇಜಿಗೆ ಭೇಟಿ ನೀಡಿ ಪ್ರವೇಶಾತಿ ಅರ್ಜಿಗಳನ್ನು ಭರ್ತಿ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹೂವಿನಹಡಗಲಿ. ಮೊ. 9448721423, 8147316279, 9591219575, 9113273556 ಸಂಖ್ಯೆಗಳಿಗೆ ಕರೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇ.12ರಂದು ಜಿಲ್ಲಾಡಳಿತದಿಂದ ಭಗವಾನ್ ಬುದ್ಧರ ಜನ್ಮ ದಿನಾಚರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ವಿಶ್ವದ ಶ್ರೇಷ್ಠ ದಾರ್ಶನಿಕ ಭಗವಾನ್ ಬುದ್ಧರ ಜಯಂತಿ ಆಚರಣೆಯನ್ನು ಮೇ.12 ರಂದು, ಸೋಮವಾರ, ಬೆಳಿಗ್ಗ 10.30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಲಿದೆ.



ಕಾರ್ಯಕ್ರಮವನ್ನು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಉದ್ಘಾಟಿಸಲಿದ್ದು, ಹೊಸಪೇಟೆ ಶಾಸಕರಾದ ಹೆಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬಳ್ಳಾರಿ ಸಂಸದ ಈ.ತುಕಾರಾಮ್, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್, ಹಗರಿಬೊಮ್ಮನಹಳ್ಳಿ ಶಾಸಕ ಕೆ.ನೇಮಿರಾಜ ನಾಯ್ಕ, ಕೂಡ್ಲಿಗಿ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಹಡಗಲಿ ಶಾಸಕ ಎಲ್.ಕೃಷ್ಣನಾಯಕ, ಹರಪನಹಳ್ಳಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ, ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎನ್.ಎಫ್. ಇಮಾಮ್ ನಿಯಾಜಿ ಭಾಗವಹಿಸಲಿದ್ದಾರೆ. ಪ್ರಗತಿಪರ ಚಿಂತಕರು ಮತ್ತು ಸಾಹಿತಿಗಳಾದ ಬಿ.ಪೀರ್ ಬಾಷ ಉಪನ್ಯಾಸ ನೀಡಲಿದ್ದಾರೆ. ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗೇಶ ರಂಗಣ್ಣವರ ಉಪಸ್ಥಿತರಿರಲಿದ್ದಾರೆ.